ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 14 ಏಪ್ರಿಲ್ 5, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

40 ಜನರ ಸಜೀವ ದಹನದ ಪ್ರಯತ್ನ-ಪತ್ರಿಕೆಗಳ ಮೌನ

ಕೇರಳದಲ್ಲಿ 5 ಜನ ಸಂಗಾತಿಗಳ ಸಾವು

ಬೆಂಗಳೂರಿಗೆ ಇತ್ತೀಚೆಗೆ ಭೇಟಿ ನೀಡಿದ್ದ ಕಾಂ.ಇಂ.ಎಂ. ಎಸ್ ರವರು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ "ಮೀಟ್ ದಿ ಪ್ರೆಸ್" ಕಾರ್ಯಕ್ರಮದಲ್ಲಿ ಪತ್ರಕರ್ತರೊಡನೆ ಮಾತನಾಡುತ್ತಾ ಚುನಾವಣೆಯ ದಿನವಾದ ಮಾರ್ಚ್ 23ರಂದೇ ನಡೆದ ಹೃದಯ ವಿದ್ರಾವಕ ಘಟನೆಯೊಂದನ್ನು ವಿವರಿಸಿದರು.

. ಕಾಂ. ನಾಯನಾರ್ ಸ್ಪರ್ಧಿಸಿದ ತ್ರಿಕರಿಪುರದ ಒಂದು ಊರು ಚೀಮೇಲಿ ರೈತ ಚಳುವಳಿಯಲ್ಲಿ ಸುವರ್ಣಾಕ್ಷರಗಳಿಂದ ಬರೆಯಲ್ಪಟ್ಟ ಕಯ್ಯೂರಿನ ಬಳಿಯೇ ಇರುವ ಊರು. ಆ ಊರಿನಲ್ಲಿ ಚುನಾವಣೆಯ ದಿನ ಸಂಜೆ 40 ಜನ ಸಂಗಾತಿಗಳು (ಅದರಲ್ಲಿ 12 ಜನ ಮಹಿಳೆಯರು) ಪಕ್ಷದ ಕಛೇರಿಯಲ್ಲಿ ಸೇರಿ ಮತದಾನದ ವಿವರಗಳನ್ನು ಕಲೆ ಹಾಕುತ್ತಿದ್ದಾರೆ. ಇದ್ದಕ್ಕಿದ್ದಂತೆ ಕಾಂಗ್ರೆಸ್ ಗೂಂಡಾಗಳ ಗುಂಪೊಂದು ಕಛೇರಿಗೆ ಮುತ್ತಿಗೆ ಹಾಕಿತು. ಸುತ್ತುವರಿದ ನಿಂತ ಈ ಗೂಂಡಾಗಳು ಕಛೇರಿ ಕಟ್ಟಡದ ಎಲ್ಲಾ ಬಾಗಿಲುಗಳನ್ನು ಕಿಟಕಿಗಳನ್ನು ಮುಚ್ಚಿದರು. ಒಂದೆ ಒಂದು ಕಿಟಕಿಯನ್ನು ತೆರೆದಿಟ್ಟು ಆದರ ಮೂಲಕ ಪೆಟ್ರೋಲಿನಲ್ಲಿ ನೆನೆದ ಹುಲ್ಲನ್ನು ಒಳಕ್ಕೆ ಹಾಕಿ ಬೆಂಕಿ ಹಾಕಿದರು. ಅಲ್ಲಿದ್ದ ಎಲ್ಲಾ 40 ಜನ ಸಂಗಾತಿಗಳನ್ನು ದಹನ ಮಾಡುವ ಅಮಾನುಷ ಯೋಜನೆ. 5-6ಜನ ಸಂಗಾತಿಗಳ ತ್ಯಾಗದ, ಬಲಿದಾನದ ಫಲವಾಗಿ ಈ ಕ್ರೂರ ಹಂಚಿಕೆ ಕೈಗೂಡಲಿಲ್ಲ. ಈ ಸಂಗಾತಿಗಳು ಉಳಿದೆಲ್ಲರನ್ನು ಹೊರಗೆಸೆದು ಪಾರಾಗುವಂತೆ ನೋಡಿಕೊಂಡರು. ಆದರೆ ಕೊನೆಗೆ ತಾವೇ ಬಲಿಯಾದರು. ಈ ಹಂಚಿಕೆಯಲ್ಲಿ ಅಲ್ಲಿಯೇ 5 ಮಂದಿ ಅಸು ನೀಗಿದರು. ಈಗಲೂ 15 ಜನ ಸಂಗಾತಿಗಳು ಆಸ್ಪತ್ರೆಯಲ್ಲಿದ್ದಾರೆ. ಅದರಲ್ಲಿ ಕೆಲವರ ಸ್ಥಿತಿ ಚಿಂತಾಜನಕವಾಗಿದೆ.

ಇಂತಹುದೊಂದು ಪೈಶಾಚಿಕ ಘಟನೆ-40 ಜನರನ್ನು ಜೀವ ಸಮೇತ ಸುಟ್ಟು ಕೊಲ್ಲುವ ಘಟನೆ-ಅದು ಕೇವಲ ರಾಜಕೀಯ ದ್ವೇಷಕ್ಕಾಗಿ ನಮ್ಮ ದೇಶದಲ್ಲಿ ಹಿಂದೆಂದೂ ನಡೆದಿರಲಿಲ್ಲವೆಂದರು ಕಾಂ.ಇ.ಎಂ.ಎಸ್. ಈ ಘಟನೆ ಚೌರಿ ಚೌರಾದ ಘಟನೆಯನ್ನು ನೆನಪಿಸಿತು. ಆಗ ರೈತರು ಪೋಲೀಸ್ ಠಾಣೆಯನ್ನು ಮುತ್ತಿ ಪೋಲೀಸರನ್ನು ಠಾಣೆಯೊಳಗೇ ಬಂಧಿಸಿ ಬೆಂಕಿ ಹಚ್ಚಿದ್ದರು. ಈ ಘಟನೆ ವರದಿಯಾದ ತಕ್ಷಣವೇ ಗಾಂಧೀಜಿಯವರು ಇಡೀ ದೇಶದಲ್ಲೆಲ್ಲಾ ಕಡೆ ಹಬ್ಬಿದ್ದ ಅಸಹಕಾರ ಚಳುವಳಿಯನ್ನು ಹಿಂತೆಗೆದುಕೊಂಡರು ಆದರೆ ಅದೇ ಗಾಂಧೀಜಿಯವರ ಹೆಸರು ಹೇಳಿಕೊಂಡು ಲಾಭಮಾಡಿಕೊಳ್ಳ ಬಯಸುವ ಕಾಂಗ್ರೆಸ್ ಪಕ್ಷದ ನಾಯಕ ಕರುಣಾಕರನ್‌ರವರು ತಮ್ಮ ಪಕ್ಷದವರ ಈ ವರ್ತನೆಯ ಬಗ್ಗೆ ಒಂದೇ

(8ನೇ ಪುಟ ನೋಡಿ)

.ದೇಶದ ರಾಜಕೀಯದಲ್ಲಿ ಮಹತ್ವದ ಬದಲಾವಣೆ

ಬೆಂಗಳೂರಿನ ಪತ್ರಕರ್ತರನ್ನುದ್ದೇಶಿಸಿ ಭಾಷಣ ಮಾಡಿದ ಕಾ|| ಇ.ಎಂ.ಎಸ್.ರವರು ಸಂಪೂರ್ಣವಾಗಿ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ನಾವುಪರಸ್ಪರ ಸಂಧಿಸುತ್ತಿದ್ದೇವೆ ಎಂದರು. ಹಾಗೆಯೇ ಇಂದು ಭಾರತ ದೇಶದಲ್ಲಿರುವ 24 ರಾಜ್ಯಗಳಲ್ಲಿ 13 ರಾಜ್ಯಗಳಲ್ಲಿಮಾತ್ರವೇ ಕಾಂಗ್ರೆಸ್(ಐ) ಅಧಿಕಾರ ನಡೆಸುತ್ತಿರುವುದು ಎಂಬ ಸಂಗತಿ ಹಾಗೂ ಅದರ ಪರಿಣಾಮವೇನು ಎಂಬುದು ನಿಮ್ಮ ತಲೆಗೆ ಹೋಗಿದೆಯೋ ಎಂದು ಪ್ರಶ್ನಿಸಿದರು.

ಪ್ರಶ್ನೆ; ಕೇರಳದ ಎಡ ಪ್ರಜಾಸತ್ತಾತ್ಮಕ ರಂಗ ಎಷ್ಟು ಕಾಲ ಉಳಿಯುತ್ತದೆ?

ಕಾಂ.ಇ.ಎಂ.ಎಸ್.

ತನ್ನ ತಾಯಿ ಹಾಗೂ ತಾತಮಾಡಿದ್ದನ್ನೇ ಪುನರಾವರ್ತನೆ ಮಾಡಲು (ಅಂದರೆ ಸರಕಾರ ವಜಾಮಾಡುವುದು ಹಾಗೂ ಪಕ್ಷಾಂತರ ಮಾಡಿಸುವುದು ಇತ್ಯಾದಿ) ಎಂದಿನವರೆಗೆ ಈಗಿನ ಪ್ರಧಾನಿ ಮಾಡಲು ಧೈರ್ಯ ಮಾಡುವುದಿಲ್ಲವೋ ಅಲ್ಲಿಯವರೆಗೂ ಎಲ್.ಡಿ.ಎಫ್. ಸರ್ಕಾರ ಉಳಿಯುತ್ತದೆ.

ಕಾಂಗ್ರೆಸ್(ಐ)ನ ಮುಖ್ಯ ಮಂತ್ರಿಗಳನ್ನು ಹೊರಹಾಕಿದ 11 ರಾಜ್ಯಗಳಲ್ಲಿ ಎರಡು ಕಾಂಗ್ರೆಸ್(ಐ) ಬೆಂಬಲದ ಮುಖ್ಯಮಂತ್ರಿಗಳನ್ನು ಹೊಂದಿವೆ. ಉಳಿದ 9 ರಾಜ್ಯಗಳಲ್ಲಿ ಪೂರ್ಣವಾಗಿ ಕಾಂಗ್ರೆಸ್ ವಿರೋಧಿ ಮಂತ್ರಿಮಂಡಲಗಳನ್ನು ಹೊಂದಿದೆ. ಈ 9ರಾಜ್ಯಗಳಲ್ಲಿ ಮೂರು ಎಡ ಪಕ್ಷಗಳ ನೇತೃತ್ವದಲ್ಲಿವೆ ಎಂದರು.

ಮತೀಯವಾದವನ್ನು ಹೊಡೆದೋಡಿಸಲು ಎಡ ಹಾಗೂ ಜಾತ್ಯಾತೀತ ಶಕ್ತಿಗಳ ಐಕ್ಯರಂಗಕ್ಕೆ ಮಾತ್ರ ಸಾಧ್ಯ ಎಂಬುದನ್ನುನಾವು ಕೇರಳದಲ್ಲಿ ಪರೀಕ್ಷೆಗೊಳಪಡಿಸಿದೆವು ಎಂದರು ಕಾ|| ಇ.ಎಂ.ಎಸ್.

ಈ ಚುನಾವಣೆಗಳ ಫಲಿತಾಂಶ ರಾಷ್ಟ್ರಮಟ್ಟದಲ್ಲಿ ಎಡ ಶಕ್ತಿಗಳ ಬೆಳವಣಿಗೆಗೆ ಹಾದಿಮಾಡುವುದೆಯೇ ಎಂಬ ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಕಾ|| ಇ.ಎಂ.ಎಸ್. ರವರು ಇಲ್ಲ ನಾವು ಸಧ್ಯದಲ್ಲಿ ಎಡ ಶಕ್ತಿಗಳು ಕಾಂಗ್ರೆಸ್(ಐ)ಗೆ ಪರ್ಯಾಯವಾಗಬಹುದೆಂದು ನಿರೀಕ್ಷಿಸುವುದಿಲ್ಲ. ಈ ಚುನಾವಣೆಗಳು ಜಾತ್ಯಾತೀತ ಪ್ರಜಾಸತ್ತಾತ್ಮಕ ಶಕ್ತಿಗಳತ್ತ ಒಂದು ಪ್ರಮುಖ ತಿರುವು ಎಂದರು.

ದೇಶದಲ್ಲಿ ಬಲ ಪ್ರತಿಗಾಮಿ ಶಕ್ತಿಗಳು ಬಲಗೊಳ್ಳುತ್ತಿವೆ. ಇಡೀ ಜನತೆಯನ್ನೇ ಬಹು ಸಂಖ್ಯಾತರು ಅಲ್ಪ ಸಂಖ್ಯಾತರೆಂಬ ಎರಡು ಭಾಗಗಳಾಗಿ ಒಡೆಯಲಾಗುತ್ತಿದೆ. ಈ ಬೆಳವಣಿಗೆಗಳನ್ನು ಗಮನಿಸಿ-ಫೆಬ್ರವರಿ ಒಂದರಂದು ಮುಸ್ಲಿಂ ಮೂಲಭೂತವಾದಿಗಳು ಅಖಿಲ ಭಾರತ ಬಂದ್‌ಗೆ ಕರೆ ನೀಡಿದರು. 29ರಂದು ಹಿಂದು ಮೂಲಭೂತವಾದಿಗಳು ಉತ್ತರ ಪ್ರದೇಶ ಬಂದ್‌ಗೆ ಕರೆ ನೀಡಿದ್ದಾರೆ ಎಂದರು.

ಎಡ ಹಾಗೂ ಜಾತ್ಯಾತೀತ ಶಕ್ತಿಗಳು ಯಾವುದೇ ರೀತಿಯಲ್ಲಿ ಬಿಜೆಪಿ

(8ನೇ ಪುಟ ನೋಡಿ)

ಪ. ಬಂಗಾಳದಲ್ಲಿ ಸತತ ಮೂರನೇ ಬಾರಿಗೆ ಎಡರಂಗದ ವಿಜಯ

ಪ. ಬಂಗಾಳ ಚುನಾವಣೆಗಳ ಫಲಿತಾಂಶಗಳ ಬಗ್ಗೆ ಸಂತಸ ವ್ಯಕ್ತಪಡಿಸಿದ ಪಿ. ಬಿ. ಪಶ್ಚಿಮ ಬಂಗಾಳದ ಜನರಿಗೆ ತನ್ನ ಅಭಿನಂದನೆಗಳನ್ನು ಸಲ್ಲಿಸುತ್ತದೆ. ಈ ಫಲಿತಾಂಶಗಳು ಎಡರಂಗ ಹಿಂದಿನ ಐದು ವರ್ಷಗಳಲ್ಲಿ ಕಾರ್ಮಿಕರ, ರೈತರ, ನೌಕರರ ಇತರ ದುಡಿವ ಜನವಿಭಾಗಗಳ ಹಿತಗಳಿಗಾಗಿ ಕೆಲಸ ಮಾಡಿದ್ದರ ಫಲವೆಂದು ಪರಿಗಣಿಸುತ್ತದೆ.

ಕಾಂಗ್ರೆಸ್ ಆಡಳಿತದ ರಾಜ್ಯಗಳಿಗೆ ಹೋಲಿಸಿದರೆ ಎಡರಂಗದ ಆಳ್ವಿಕೆಯಲ್ಲಿ ಪ. ಬಂಗಾಳ ಧರ್ಮ ಜಾತಿಗಳ ನಡುವಣ ಶಾಂತಿ ಸೌಹಾರ್ದತೆಯ ದೀಪದಂತಿತ್ತು. ರಾಷ್ಟ್ರೀಯ ಐಕ್ಯತೆಯ ಉತ್ಕೃಷ್ಟ ಮಾದರಿಯಾಗಿತ್ತು.

ಇಂತಹ ದಾಖಲೆಗಳ ಮುಂದೆ ಕಾಂಗ್ರೆಸ್ [ಐ] ತನ್ನ ಸಂಖ್ಯಾಬಲವನ್ನು ಹೆಚ್ಚಿಸಿಕೊಳ್ಳಲು ಮಾತ್ರವಲ್ಲ ಚುನಾವಣಾ ಪ್ರಚಾರದ ಕೊನೆಯ ಪಾದದಲ್ಲಿ ಪ್ರಧಾನ ಮಂತ್ರಿಯವರು ಎಡರಂಗವನ್ನು ಕಿತ್ತೊಗೆಯಲು ಕೂಡ ಕರೆ ನೀಡಿದರು. ಪ್ರಧಾನಮಂತ್ರಿಯವರು ಹರಿಬಿಟ್ಟ ಪ್ರಚಾರಕ್ಕೆ ಯಾವುದೇ ರಾಜಕೀಯ ದಿಕ್ಕು ದೆಸೆಗಳಿರಲಿಲ್ಲ. ನಯಾ ಬಂಗಾಲದ ಖಾಲಿ ಘೋಷಣೆ, ಖೋಟಾ ಆರ್ಥಿಕ ಕೊಡುಗೆಗಳ ಜೊತೆಗೆ ಸುಳ್ಳಿನ ಬಿರುಮಳೆ ಸೇರಿದಂತಿತ್ತು ಅವರ ಪ್ರಚಾರ.

ಸಿ. ಪಿ. ಐ. [ಎಂ] ಕಾರ್ಯಕರ್ತರನ್ನು ಯಾರು ಸಾವಿರಾರು ಸಂಖ್ಯೆಯಲ್ಲಿ ಜನತೆಗೆ ಸೇವೆ ಸಲ್ಲಿಸುತ್ತಿದ್ದಾರೋ 700 ದಶಕದ ಕಾಂಗ್ರೆಸ್‌ನ ಭಯೋತ್ಪಾದನೆಯನ್ನು, ತುರ್ತು ಪರಿಸ್ಥಿತಿಯನ್ನು ಯಾರು ಎದುರಿಸಿದರೊ ಅವರನ್ನು ನಿಂದಿಸಿದರು. ಇದೇ ಕಾರ್ಯಕರ್ತರೇ ಇಡೀ ದೇಶದಲ್ಲಿಯೇ ಅತ್ಯಂತ ಬಲಿಷ್ಠ ಸಾಮೂಹಿಕ ಸಂಘಟನೆಗಳನ್ನು ಕಟ್ಟಿರುವುದು. ಕಾಂಗ್ರೆಸ್ [ಐ] ಆರಂಭದಲ್ಲಿ ಬೆಂಗಾಲಿ ಹಾಗೂ ಬಂಗಾಲಿಗಳಲ್ಲದ ಜನರ ಐಕ್ಯತೆಯನ್ನೊಡೆಯಲು ಗೂರ್ಖಾ ಲ್ಯಾಂಡ್ ಚಳುವಳಿಯನ್ನು ಉಪಯೋಗಿಸಲು ಹಿಂಜರಿಯಲಿಲ್ಲ.

ಕಾಂಗ್ರೆಸ್‌ನ ಈ ಅಪಪ್ರಚಾರಕ್ಕೆ ತಕ್ಕ ಉತ್ತರ ನೀಡಿದ ಜನತೆ ಎಡರಂಗಕ್ಕೆ ಶೇಕಡ 85 ರಷ್ಟು ಸ್ಥಾನಗಳನ್ನು ಇತರ ಎಡ ಶಕ್ತಿಗಳ ನೇತೃತ್ವದಲ್ಲಿ ವರ್ಗ ಹಾಗೂ ಸಾಮೂಹಿಕ ಹೋರಾಟಗಳ ದೀರ್ಘ ಕಾಲದ ದಾಖಲೆಯಿಂದ ರೂಢಿಸಿದ ವರ್ಗ ಶಕ್ತಿಗಳ ಸಮೀಕರಣದ ಫಲ. ಈ ವಿಜಯ ದೇಶದಲ್ಲಿ ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳ ಬೆಳವಣಿಗೆಗೆ ಅನುವು ಮಾಡುತ್ತದೆಂದು ಪಿ. ಬಿ. ಅಭಿಪ್ರಾಯಪಟ್ಟಿದೆ.

ಪಾಲಿಟ್‌ಬ್ಯೂರೊ ಅಭಿನಂದನೆ

ಕೇರಳದಲ್ಲಿ ನಿರ್ಣಾಯಕ ವಿಜಯ

ಕಾಂಗ್ರೆಸ್ [ಐ] ನೇತೃತ್ವದ ಜಾತೀಯ-ಮತೀಯ ಶಕ್ತಿಗಳನ್ನು ನಿರ್ಧಾರಕವಾಗಿ ಸೋಲಿಸಿದ್ದಕ್ಕಾಗಿ ಕೇರಳದ ಜನತೆಯನ್ನು ಅಭಿನಂದಿಸುತ್ತಾ, ಸಿ.ಪಿ.ಐ [ಎಂ]ನ ಪಾಲಿಟ್‌ಬ್ಯೂರೊ ಜಾತೀಯ, ಮತೀಯ ಶಕ್ತಿಗಳೊಂದಿಗೆ ಯಾವ ಮೈತ್ರಿಕೂಟವೂ ಬೇಡ ಎಂಬ ಪಕ್ಷದ ದೃಢ ತತ್ವನಿಷ್ಠ ನೀತಿ ಜನತೆಯಿಂದ ಪ್ರತಿಸ್ಪಂದನ ಪಡೆದಿದೆ. ಪ್ರಧಾನಿಯವರು "ಜಾತ್ಯಾತೀತತೆ" ಎಂಬುದಕ್ಕೆ ಅಪಾರ್ಥಗಳನ್ನು ನೀಡುತ್ತಾ ರಾಷ್ಟ್ರಮಟ್ಟದಲ್ಲಿ ಧರ್ಮ ರಾಜಕೀಯಗಳನ್ನು ಬೇರೆ ಮಾಡುವ ಬಗ್ಗೆ ಮಾತನಾಡುತ್ತಾ, ಕೇರಳದಲ್ಲಿ ಅವೇ ಧಾರ್ಮಿಕ ಶಕ್ತಿಗಳೊಡನೆ ಬೆರೆಯುವ ಇಬ್ಬಗೆಯ ನೀತಿಯ ವಿರುದ್ಧ ಧರ್ಮನಿರಪೇಕ್ಷ ನೀತಿಯಲ್ಲಿ ತಮ್ಮ ನಂಬಿಕೆಯನ್ನು ತಂದಿದೆ. ಇದರಿಂದ ಕಾಂಗ್ರೆಸ್ [ಐ] ತನ್ನ ಸಂಕುಚಿತ ಸಮೀಪ ದೃಷ್ಟಿಯ ನಾಸಿಯನ್ನು ಮನಗಂಡು ಸರಿಯಾದ ಪಾಠ ಕಲಿಯುವುದೆಂದು ಆಶಿಸಿದೆ.

(8ನೇ ಪುಟ ನೋಡಿ)

ಸೂಪರ್ ಕಂಪ್ಯೂಟರ್ ನಮಗೆ ಬೇಕೆ ?

ಭಾರತಕ್ಕೆ ಅಮೇರಿಕ ಸೂಪರ್ ಕಂಪ್ಯೂಟರ್‌ಗಳನ್ನು ಮಾರುವ ವಿಷಯದ ಬಗ್ಗೆ ಚರ್ಚೆ ಇತ್ತೀಚಿನ ತಿಂಗಳುಗಳಲ್ಲಿ ಬಹಳಷ್ಟು ಸುದ್ದಿಯಲ್ಲಿದೆ. ರಾಜೀವ್‌ಗಾಂಧಿ ಸರಕಾರ,ಅದರಲ್ಲೂ ಸ್ವತಃ ಪ್ರಧಾನ ಮಂತ್ರಿಗಳೇ ಈ ವಿಷಯದಲ್ಲಿ ಮೊದಲಿನಿಂದಲೂ ಆಸಕ್ತಿ ವಹಿಸಿದ್ದಾರೆ. ಅಮೇರಿಕನ್ ಸರಕಾರ ಸಹ ಈ ವಿಷಯಕ್ಕೆ ಉನ್ನತ ಮಟ್ಟದಲ್ಲಿ ಸಾಕಷ್ಟು ಪ್ರಾಮುಖ್ಯತೆ ಕೊಟ್ಟಿದೆ. ಈ ಹಿನ್ನೆಲೆಯಲ್ಲಿ ನಿಮಗೆ ಇದು ಬೇಕೆ? ಇದರ ಉಪಯೋಗಗಳೇನು? ಅಮೇರಿಕದಿಂದ ಸೂಪರ್ ಕಂಪ್ಯೂಟರ್ ಆಮದಿನ ಸಾಧಕ ಬಾಧಕಗಳೇನು?-ಎಂಬುದರ ಮೇಲೆ ಬೆಳಕು ಚೆಲ್ಲುವುದಗತ್ಯ.

ಷರತ್ತುಗಳ ಸುಳಿಯಲ್ಲಿ

ಹಲವು ತಿಂಗಳುಗಳ ಹಿಂದೆ ರಾಜೀವ್‌ಗಾಂಧಿಯವರು ಅಮೇರಿಕಕ್ಕೆ ಭೇಟಿ ನೀಡಿದಾಗ ಉಚ್ಚ-ತಂತ್ರಜ್ಞಾನದ ಕ್ಷೇತ್ರದಲ್ಲಿ ಸಹಕಾರದ ಒಪ್ಪಂದಕ್ಕೆ ಸಹಿ ಹಾಕಿದಾಗ,ಸೂಪರ್ ಕಂಪ್ಯೂಟರ್ ಬಗ್ಗೆ ವಿಶೇಷ ಪ್ರಸ್ತಾಪ ಮಾಡಿದ್ದರು. ಅಂದಿನಿಂದ ಈ ವ್ಯವಹಾರದ ಬಗ್ಗೆ ಅಮೇರಿಕನ್ ಸರಕಾರದ ಬೇರೆ ಬೇರೆ ಹಂತಗಳಲ್ಲಿ ಇದಕ್ಕೆ ಅಡೆತಡೆಗಳು,ಹೊಸ ಶರತ್ತುಗಳು ಬಂದಿವೆ. ಒಟ್ಟಾರೆಯಾಗಿ ರೀಗನ್ ಸರಕಾರ ಈ ಬಗ್ಗೆ ಮೀನ ಮೇಷ ಎಣಿಸುತ್ತಾ ಬಂದಿದೆ.ಸೂಪರ್‌ಕಂಪ್ಯೂಟರ್‌ನ ಆಮದನ್ನು ರೀಗನ್ ಸರಕಾರ ಭಾರತದೊಂದಿಗೆ ಬಾಂಧವ್ಯ ಉತ್ತಮ ಪಡಿಸುವ, ಹೊಸ ಚಿಂತನಲಹರಿಯ ಪ್ರತೀಕವಾಗಿ ಸಾರ್ವಜನಿಕ ಅಭಿಪ್ರಾಯ ಮೂಡಿಸುವ ಪ್ರಯತ್ನಕ್ಕೆ ಬಳಸಿಕೊಳ್ಳುತ್ತಿದೆ. ಆದರೆ ನಿಜವಾಗಿಯೂ ಇದೊಂದು ಆಮಿಷ.

ಈ ಬಗ್ಗೆ ಮಾತುಕತೆ ಆರಂಭವಾದಾಗ ಜಗತ್ತಿನಲ್ಲಿ ಅಮೇರಿಕದ ಎರಡು ಕಂಪನಿಗಳು CRAY ಮತ್ತು CDC ಮಾತ್ರ ಸೂಪರ್‌ಕಂಪ್ಯೂಟರ್‌ಗಳನ್ನು ತಯಾರಿಸುತ್ತಿದ್ದವು. ಆದರೆ ಅನಂತರ ಸೋವಿಯತ್ ಒಕ್ಕೂಟ ಮತ್ತು ಜಪಾನ್ ಈ ಕ್ಷೇತ್ರದಲ್ಲಿ ಕಾಲಿಟ್ಟಿವೆ. ಜಗತ್ತಿನಲ್ಲಿ ಇಂದು ಸುಮಾರು 60 ಸೂಪರ್ ಕಂಪ್ಯೂಟರ್‌ಗಳಿವೆ. ಈಗಾಗಲೇ ತಯಾರಿಸಲಾಗಿರುವ ಸೂಪರ್ ಕಂಪ್ಯೂಟರ್‌ಗಳ ಮಾದರಿ ಹೆಸರು ಮತ್ತು ವೇಗವನ್ನು ಬಾಕ್ಸ್‌ನಲ್ಲಿ ನೀಡಲಾಗಿದೆ. ಭಾರತ ಸರಕಾರ CRAY-XMP ಮಾದರಿಯ ಸೂಪರ್‌ಕಂಪ್ಯೂಟರ್ ಆಮದಿಗೆ ಪರವಾನಿಗೆ ಕೇಳಿತ್ತು. ಭಾರತ ಸರಕಾರ ಸೂಪರ್‌ಕಂಪ್ಯೂಟರ್‌ನ್ನು ಹವಾಮಾನ ಮುನ್ಸೂಚನೆ ಅಧ್ಯಯನಕ್ಕಾಗಿ ಉಪಯೋಗಿಸಲಾಗುವುದೆಂದು ಹೇಳಿಕೊಂಡಿತ್ತು. ಆದರೂ ರೀಗನ್ ಸರಕಾರ ಹಲವು ಶರತ್ತುಗಳನ್ನು ಹಾಕಿದೆ. ಮೊದಲನೆಯದಾಗಿ ಸೂಪರ್‌ಕಂಪ್ಯೂಟರ್‌ನ ಉಪಯೋಗವನ್ನು ಹವಾಮಾನ ಮುನ್ಸೂಚನೆ ಅಧ್ಯಯನ, ಅರಣ್ಯ ಅಧ್ಯಯನ, ಕೃಷಿ ಮತ್ತು ಮೂಲಧಾತು ಜೀವಶಾಸ್ತ್ರ [Molecular Biology] ಗಳಿಗೆ ಸೀಮಿತಗೊಳಿಸಲಾಗಿದೆ. ಉಳಿದ ಉಪಯೋಗಗಳಾದ ಸಾಗರಶಾಸ್ತ್ರ[Occeanography] ಅಧ್ಯಯನ; ಆರ್ಥಿಕ ಮಾದರಿ ನಿರ್ಮಾಣ [ಯೋಜನಾ ಕಾರ್ಯದಲ್ಲಿ ಇದು ಉಪಯೋಗವಾಗುತ್ತದೆ]; ಪ್ರಕ್ಷಿಪಣಿ ಸಂಶೋಧನೆ, ನಕ್ಷೆ ತಯಾರಿಕೆ,ದೂರ ಗ್ರಹಣ [re-note sensing] ಮುಂತಾದ ರಕ್ಷಣಾ ಸಂಬಂಧಿ ಉಪಯೋಗಗಳು ಅಣು ಮತ್ತು ಪ್ಲಾಸ್ಮಾ ಶಕ್ತಿ ಸಂಶೋಧನೆ; ಜೆನೆಟಿಕ್‌ಇಂಜಿನೇರಿಂಗ್ ಮತ್ತು ಇತರ ಉಚ್ಚ ವೈದ್ಯಕೀಯ ಸಂಶೋಧನೆ-ಮುಂತಾದುವುಗಳಿಗೆ ಈ ಸೂಪರ್ ಕಂಪ್ಯೂಟರನ್ನು ಬಳಸಬಾರದು ಎಂದು ಸ್ಪಷ್ಟವಾಗಿ ಹೇಳಲಾಗಿದೆ.

ಎರಡನೆಯದಾಗಿ ಸೂಪರ್‌ಕಂಪ್ಯೂಟರನ್ನು ಯಾವ ರೀತಿಯಲ್ಲಿ ಯಾವುದಕ್ಕೆಬಳಸಲಾಗುತ್ತಿದೆ ಎಂದು ಮೇಲ್ವಿಚಾರಣೆ ನೋಡಿಕೊಳ್ಳಲು 'ಅಮೇರಿಕನ್ ಸರ್ಕಾರದ ಪ್ರತಿನಿಧಿಗಳ ತಂಡ ಖಾಯಂ ಆಗಿ ಇಲ್ಲಿ ತಂಗಿರುತ್ತದೆ. ಅಲ್ಲದೆ ಇದರ ತಂತ್ರಜ್ಞಾನದ ಮತ್ತು ಉಪಯೋಗದ ಬಗ್ಗೆ ಯಾವುದೇ ಮೂರನೇ ದೇಶಕ್ಕೆ ಅಥವಾ ಯಾವುದೇ ಗುಂಪಿಗೆ ಈ ಪ್ರತಿನಿಧಿಗಳ ತಂಡದ ಪರವಾನಿಗೆ ಇಲ್ಲದೆ ಮಾಹಿತಿ ಕೊಡುವಂತಿಲ್ಲ. ಇದು ದೇಶದ ಸಾರ್ವಭೌಮತ್ವಕ್ಕೆ ತಿಲಾಂಜಲಿ ಕೊಟ್ಟಂತೆ.

ಇಂತಹ ಷರತ್ತುಗಳು ಮತ್ತು ಸಾರ್ವಜನಿಕಗೊಳಿಸದ ಇನ್ನೂ ಹಲವು ಷರತ್ತುಗಳನ್ನೊಳಗೊಂಡ ಒಪ್ಪಂದಕ್ಕೆ ಈಗಾಗಲೇ ಸರ್ಕಾರ ಸಹಿ ಹಾಕಿದೆ. ಇವೆಲ್ಲಾ ಆದ ಮೇಲೆ ಭಾರತ ಹೇಳಿರುವ CRAY-XMPಯ ಬದಲು ಕಡಿಮೆ ವೇಗದ CYBER-205ನಷ್ಟೇ ಭಾರತಕ್ಕೆ ಕೊಡಲು ರೀಗನ್ ಸರ್ಕಾರ ಪರವಾನಿಗೆ ನೀಡಿದೆ. ಇದು ಈಗಾಗಲೇ ಹಲವಾರು ಮೂರನೇ ಜಗತ್ತಿನ ದೇಶಗಳಲ್ಲದೆ ಮತ್ತು ಈಗಾಗಲೇ ಹಲವು ವರ್ಷ ಹಳೆಯದು,ಇತ್ತೀಚಿನ ಮಾದರಿ ಅಲ್ಲ ಎಂದು ಗಮನಿಸಬೇಕು. ಭಾರತ ಕೇಳಿರುವ ವೇಗದಷ್ಟೇ ವೇಗದ ಸೂಪರ್‌ಕಂಪ್ಯೂಟರನ್ನು ತಯಾರಿಸಿ,ಯಾವುದೇ ಷರತ್ತುಗಳಿಲ್ಲದೆ ಮಾರಲು ಒಪ್ಪಿರುವ ಸೋವಿಯತ್ ಸಲಹೆಯನ್ನು ಭಾರತ ಸರ್ಕಾರ ಪರಿಶೀಲಿಸಿಯೂ ಇಲ್ಲ.

(6ನೇ ಪುಟ ನೋಡಿ)

ಸೂಪರ್ ಕಂಪ್ಯೂಟರ್ ಬಗ್ಗೆ ನಮ್ಮ ಕಂಪ್ಯೂಟರ್ ಪ್ರಿಯ ಪ್ರಧಾನಿಯವರು ಪರಿತಪಿಸುತ್ತಿದ್ದಾರೆ ಇದು ನಮಗೆ ಬೇಕೆ?

ಸೂಪರ್ ಕಂಪ್ಯೂಟರ್ ಎಂದರೇನು ?

ಸೂಪರ್ ಕಂಪ್ಯೂಟರ್ ಅತ್ಯಂತ ವೇಗವಾಗಿ ಕೆಲಸ ಮಾಡುವ ಕಂಪ್ಯೂಟರ್. ಸೂಪರ್‌ಕಂಪ್ಯೂಟರ್ ಎಂದರೆ ದೊಡ್ಡ ಕಂಪ್ಯೂಟರ್ ಎಂದರ್ಥವಲ್ಲ. ಕಂಪ್ಯೂಟರಿನ ವೇಗವನ್ನು ಸಾಮಾನ್ಯವಾಗಿ ಒಂದು ಸೆಕೆಂಡಿಗೆ ಅದು ಮಾಡಬಲ್ಲ ಅಂಕಗಣಿತದ ಬಿಡಿ ಪ್ರಶ್ನೆಗಳಲ್ಲಿ ಅಳತೆ ಮಾಡುತ್ತಾರೆ. ಸಾಮಾನ್ಯ ಕಂಪ್ಯೂಟರ್‌ಗಳ ವೇಗ ಕೆಲವು ಪ್ರತಿ ಸೆಕೆಂಡಿಗೆ ಸುಮಾರು ಹತ್ತು ದಶಲಕ್ಷ [ಮಿಲಿಯ] ಅಂಕಗಣಿತದ ಬಿಡಿ ಪ್ರಶ್ನೆಗಳಿಗಿಂತ ಕಡಿಮೆ ಇರುತ್ತದೆ. 100 ಮಿಲಿಯಕ್ಕಿಂತ ಹೆಚ್ಚು ಅಂಕಗಣಿತದ ಬಿಡಿ ಪ್ರಶ್ನೆಗಳನ್ನು ಪ್ರತಿ ಸೆಕೆಂಡಿಗೆ [Floating Point Operations per second-FLOPS] ಬಿಡಿಸಬಲ್ಲ ಕಂಪ್ಯೂಟರ್‌ಗಳಿಗೆ ಸೂಪರ್‌ಕಂಪ್ಯೂಟರ್ ಎನ್ನುತ್ತಾರೆ.

ಕಂಪ್ಯೂಟರಿನ ಉಪಯೋಗವನ್ನು ಮಾಹಿತಿ ಸಂಸ್ಕರಣ ಮತ್ತು ಸಂಕೀರ್ಣ ಗಣಿತದ ಸಮಸ್ಯೆಗಳನ್ನು ಬಿಡಿಸುವ ಎರಡು ವರ್ಗಗಳಾಗಿ ವಿಂಗಡಿಸಬಹುದು. ಕಂಪ್ಯೂಟರ್‌ನ ವ್ಯಾಪಾರಿ, ಕೈಗಾರಿಕಾ ಉಪಯೋಗ ಮೊದಲನೆಯ ರೀತಿಯದಾದರೆ ವೈಜ್ಞಾನಿಕ ಕ್ಷೇತ್ರಗಳಲ್ಲಿನ ಉಪಯೋಗ ಎರಡನೆಯ ರೀತಿಯದು ಸೂಪರ್‌ಕಂಪ್ಯೂಟರ್ ಸಂಕೀರ್ಣ ಗಣಿತದ ಸಮಸ್ಯೆಗಳನ್ನು ಅತ್ಯಂತ ವೇಗವಾಗಿ ಬಿಡಿಸಲಿಕ್ಕೆಂದೇ ನಿರ್ಮಿಸಲಾಗುವ ಕಂಪ್ಯೂಟರ್.

ಸೂಪರ್ ಕಂಪ್ಯೂಟರ್ ವೇಗ

ಮಾದರಿ ಹೆಸರು	ನಿರ್ಮಿಸಿದ ವರ್ಷ	ವೇಗ[ಮಿಲಿಯ FLOPಗಳಲ್ಲಿ]
CRAY-1	1976	160
CYBER-205 [CDC]	1983	200
CRAY-XMP	1983	420
CRAY-2	1985	2000

ಖಲಿಸ್ತಾನಿಗಳ ಹಾವಳಿಯಿಂದ ತಲ್ಲಣಿಸುತ್ತಿರುವ ಪಂಜಾಬಿನಲ್ಲಿ

ಕ್ರಾಂತಿಕಾರಿ ಭಗತ್‌ಸಿಂಗ್ ದಿನಾಚರಣೆ

ಮಾರ್ಚ್ 23 1931-ದೇಶದ ಅಪ್ರತಿಮ ಕ್ರಾಂತಿಕಾರಿಗಳಾದ ಭಗತ್‌ಸಿಂಗ್,ರಾಜಗುರು ಮತ್ತು ಸುಖದೇವ್ ನಸುನಗೆಯೊಂದಿಗೆ ನೇಣಿನ ಕುಣಿಕೆಗೆ ಕುತ್ತಿಗೆಯೊಡ್ಡಿದ ದಿನ. ಕ್ರಾಂತಿ ಚಿರಾಯುವಾಗಲಿ, ಸಾಮ್ರಾಜ್ಯಶಾಹಿ ನಾಶವಾಗಲಿ ಎಂಬ ಘೋಷಗಳು ಜೈಲಿನ ಗೋಡೆಗಳಿಗೆ ಅಪ್ಪಳಿಸಿ ಅನುರಣಿಸಿದ ದಿನ. ಬ್ರಿಟಿಷರ ದಬ್ಬಾಳಿಕೆಯನ್ನು ಧಿಕ್ಕರಿಸಿ ನಡೆಯುತ್ತಿದ್ದ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಚೈತನ್ಯ ನೀಡಿದ ಈ ಘಟನೆ ಎಂದಿಗೂ ಜನಮನದಲ್ಲಿ ಅಳಿಯಲಾರದ ನೆನಪುಗಳನ್ನು ಬಿಟ್ಟು ಹೋಗಿದೆ.

ಮಾರ್ಚ್ 23, 1987 ಸರಿಯಾಗಿ 56 ವರುಷಗಳ ನಂತರ ಭಗತ್‌ಸಿಂಗನು ಹುಟ್ಟಿದ ಗ್ರಾಮವಾದ ಜಲಂಧರ್ ಜಿಲ್ಲೆಯ ಕಟಕರ್ ಕಲನದಲ್ಲಿ ಸಾವಿರಾರು ಸ್ತ್ರೀ ಪುರುಷರು ಮಕ್ಕಳು ಹುತಾತ್ಮರ ದಿನವನ್ನು ಆಚರಿಸಿದರು. ಭಾರತಕ್ಕೆಎದುರಾಗಿ ಸಾಮ್ರಾಜ್ಯಶಾಹಿ ನಡೆಸುತ್ತಿರುವಪಿತೂರಿಗಳನ್ನು ಸಾಮ್ರಾಜ್ಯಶಾಹಿಗಳಕೈಗೊಂಬೆಗಳಾಗಿ ಹಿಂದೂ ಸಿಖ್ ಐಕ್ಯತೆಯನ್ನು ನಾಶ ಮಾಡುತ್ತಿರುವ ಕೊಲೆಪಾತಕ ಉಗ್ರಗಾಮಿಗಳ ವಿಚ್ಛಿದ್ರಕಾರಿಗಳ ವಿರುದ್ಧ ಮುಗಿಲು ಮುಟ್ಟುವ ಘೋಷಣೆಗಳನ್ನು ಕೂಗಿದರು.

ರಾಜಕೀಯ ಉದ್ದೇಶಗಳಿಗಾಗಿ ತಖ್ತ್‌ನ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವಭಯೋತ್ಪಾದಕರನ್ನು ಅವರ ಮುಖಂಡನಾದ ದರ್ಶನಸಿಂಗ್ ನೀತಿಯನ್ನು ವಿರೋಧಿಸುವಂತೆ ಸರ್ವಪಕ್ಷಗಳು ನೀಡಿದ ಕರೆಗೆ ಒಗ್ಗೂಟ್ಟಿ ಪಂಜಾಬಿನ ಜನತೆ ಭಗತ್ ಸಿಂಗ್‌ನ ಹುಟ್ಟೂರಿನಲ್ಲಿ ನಡೆದ ಹುತಾತ್ಮರ ದಿನದ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಪಾಲ್ಗೊಂಡರು.

ಕಳೆದ ಐದು ವರ್ಷಗಳಿಂದ ಪಂಜಾಬನ್ನು ಮುಸುಕಿರುವಭೀಕರ ಕಾರ್ಮೋಡಗಳನ್ನು ಹರಿದೊಗೆಯುವ ಸಂಕಲ್ಪವನ್ನು ಪಂಜಾಬಿನ ಜನತೆ ಕೈಗೊಂಡಿದ್ದಾರೆ. ಕರಾಳ ಅಧ್ಯಾಯವನ್ನು ಕೊನೆಗೊಳಿಸುವ ದಿಕ್ಕಿನಲ್ಲಿ ಸರ್ವಪಕ್ಷಗಳ ಐಕ್ಯಕರೆ ಮತ್ತು ಪ್ರಚಾರಗಳು ಅಗಾಧ ಉತ್ಸಾಹವನ್ನು ಜನತೆಯಲ್ಲಿ ಮೂಡಿಸುತ್ತಿವೆ.

ಜನತೆ ಭಯವನ್ನು ತೊರೆದು, ದೇಶಪ್ರೇಮದ ಗಾಢ ಭಾವನೆಗಳಿಗೆ ಧ್ವನಿ ನೀಡ ತೊಡಗಿದ್ದಾರೆ. ಜನತೆಯ ಈ ಕ್ರಿಯಾಶೀಲ ಪ್ರವೇಶದಿಂದಾಗಿ ಭಯೋತ್ಪಾದಕರು ತಲ್ಲಣಿಸಿದ್ದಾರೆ. ಜನತೆಯ ಮೇಲೆ ಆಕ್ರಮಣ ನಡೆಸುತ್ತಿದ್ದವರು, ತಮ್ಮನ್ನು ರಕ್ಷಿಸಿಕೊಂಡರೆ ಸಾಕೆಂಬ ಸ್ಥಿತಿಯನ್ನು ತಲುಪಿದ್ದಾರೆ.

ಕಟಕರ್ ಕಲನದ ಹುತಾತ್ಮರ ಮ್ಯುಸಿಯಂ ಬಳಿಯ ಹುಲ್ಲುಹಾಸಿನ ಮೇಲೆ ನಡೆದ ಸಭೆಗೆ ಮೆರವಣಿಗೆಗಳಲ್ಲಿ ಹರಿದು ಬಂದ ಜನಸಮೂಹ ಬೀಳುತ್ತಿದ್ದ ಮಳೆಯನ್ನು ಲೆಕ್ಕಿಸದೆ ಸಭೆಯ ಕೊನೆಯವರೆಗೂ ಇದ್ದು ತಮ್ಮ ಉತ್ಸಾಹವನ್ನು ತೋರ್ಪಡಿಸಿದರು. ಸಿ.ಪಿ.ಐ. [ಎಂ] ಮತ್ತು ಅದರ ಸಾಮೂಹಿಕ ಸಂಘಟನೆಗಳು ಅದರಲ್ಲೂ ಮುಖ್ಯವಾಗಿ ಮಹಿಳಾ ಸಂಘಟನೆ ಸಭೆಗೆ ಜನರನ್ನು, ಮಹಿಳೆಯರನ್ನು ಅಣಿನೆರೆಸುವಲ್ಲಿ ತುಂಬಾ ಶ್ರಮವಹಿಸಿತು.

ಸಭೆಯನ್ನುದ್ದೇಶಿಸಿ ಮುಖ್ಯಮಂತ್ರಿ, ಸುರ್ಜಿತ್‌ಸಿಂಗ್ ಬರ್ನಾಲಾ, ಸಿ.ಪಿ.ಐ. [ಎಂ] ಮುಖಂಡರಾದ ಕಾ. ಹರಕಿಶನ್ ಸಿಂಗ್ ಸುರ್ಜಿತ್, ಕಾ. ಜಿ.ಎಸ್. ರಾಂಧವ, ಕೇಂದ್ರ ಮಂತ್ರಿಗಳಾದ ವಸಂತಸಾಠೆ, ಮತ್ತು ಜಿ. ಎಸ್. ಧಿಲ್ಲೋನ್ ಎ.ಐ.ಸಿ.ಸಿ. [ಐ] ನ ಪ್ರಧಾನ ಕಾರ್ಯದರ್ಶಿ ನವಲ್‌ಕಿಶೋರ್ ಶರ್ಮಾ ಪಂಜಾಬ್ ಕಾಂಗ್ರೆಸ್ [ಐ] ಅಧ್ಯಕ್ಷ ಬಿಯಾಂಕ ಸಿಂಗ್, ಶಿರೋಮಣಿ ಅಕಾಲಿದಳದ ಅಧ್ಯಕ್ಷ ಜಾಕೇದಾರ್ ಜೀವನಸಿಂಗ್ ಎಸ್.ಜಿ.ಪಿ.ಸಿ.ಯ ಮಾಜೀ ಅಧ್ಯಕ್ಷ ಕಾಬೂಲ್‌ಸಿಂಗ್, ಪಂಜಾಬಿನ ಹಣಕಾಸು ಮಂತ್ರಿ ಬಲವಂತ ಸಿಂಗ್, ಸಿ ಪಿ.ಐ.ನ ಅವತಾರ ಸಿಂಗ್ ಮಲೋಹಿತ್ರ ಮತ್ತು ಪ್ಯಾರಾ ಸಿಂಗ್ ದೇವಸಿ ಬಿ.ಜೆ.ಪಿ.ಯ ಕೇದಾರ್ ನಾಥ್ ಸಾಹ್ನಿ ಮತ್ತು ಸ್ವರಣಿರಾಂ ಲೋಕದಳದ ರವೀಂದ್ರವರ್ಮ, ತೆಲುಗು ದೇಶಂನ ಸತ್ಯನಾರಾಯಣರೆಡ್ಡಿ ಎ.ಡಿ.ಎಂ.ಕೆ.ಯ ಜನಾರ್ಧನ್, ಎ.ಜಿ.ಪಿ.ಯ ಎಂ. ಆರ್. ಸೈಕಿಯಾ ಮುಂತಾದವರು ಮಾತನಾಡಿದರು.

ಹುತಾತ್ಮ ಭಗತ್‌ಸಿಂಗ್‌ರವರ ತಮ್ಮಂದಿರಾದ ರಾಜೀಂದರ್‌ಸಿಂಗ್ ಮತ್ತು ಕುಲ್ತಾರ್‌ಸಿಂಗ್ ಅವರುಗಳು ಸಭೆಯನ್ನುದ್ದೇಶಿಸಿ ಮಾತನಾಡಿದ್ದು ಸಮಾರಂಭದ ವೈಶಿಷ್ಟ್ಯವಾಗಿತ್ತು.

ಕರ್ನಾಟಕದಲ್ಲಿ

ಹರಿಹರ

ಮಾರ್ಚ್ 23ರಂದು ಕಿರ್ಲೋಸ್ಕರ್ ಕಾರ್ಮಿಕರು ಮತ್ತು ಎಸ್.ಎಫ್.ಐ. ಕಾರ್ಯಕರ್ತರು ಒಂದು ಸಭೆ ನಡೆದು ಭಗತ್‌ಸಿಂಗ್‌ರು ಹುತಾತ್ಮರಾದ ದಿನಾಚರಣೆ ನಡೆಸಿದರು. ಸಭೆಯಲ್ಲಿ ಮಾತನಾಡಿದ ಕಾಂ. ನಿತ್ಯಾನಂದ ಸ್ವಾಮಿಯವರು ಭಗತ್‌ಸಿಂಗ್ ಅವರ ಸಂದೇಶವನ್ನು ಇಂದು ಯುವಕರ ನಡುವೆ ಜನಪ್ರಿಯ ಗೊಳಿಸಬೇಕು ಎಂದರು ಇದೇ ಸಮಾರಂಭದಲ್ಲಿ ಯುವಕರ ಸಂಘಟನೆ, ಚರ್ಚೆಗಾಗಿ ಡಿ.ವೈ.ಎಫ್.ಐ. ಯನ್ನು ಪುನರಾರಂಭಿಸಲು ತೀರ್ಮಾನಿಸಲಾಯ್ತು. ಈ ಬಗ್ಗೆ ಏಪ್ರಿಲ್ 2ರಂದು ವಿಸ್ತೃತ ಸಭೆ ಕರೆಯಲು ಕಿರ್ಲೋಸ್ಕರ್ ಕೆಲಸಗಾರರ ಸಂಘದ ಕಾಂ. ಚರಣಾಚಾರಿಯವರಿಗೆ ಜವಾಬ್ದಾರಿ ವಹಿಸಲಾಯಿತು.

ಹೊಸಪೇಟೆ

ಇಲ್ಲಿನ ಎಸ್.ಎಫ್.ಐ.ನಗರ ಸಮಿತಿ ವಿವಿಧ ಕಾರ್ಯಕ್ರಮಗಳ ಮೂಲಕ ಶಹೀದ್ ಭಗತ್‌ಸಿಂಗರ ಹುತಾತ್ಮ ದಿನವನ್ನು ಆಚರಿಸಿತು. ಭಗತ್‌ಸಿಂಗ್ ಅವರ ಜೀವನ ಹಾಗೂ ಅವರ ವಿಚಾರಗಳ ಪ್ರಸಕ್ತತೆಯ ಬಗ್ಗೆ ಎಸ್.ಎಫ್.ಐ. ರಾಜ್ಯಸಮಿತಿ ಉಪಾಧ್ಯಕ್ಷ ಕಾಂ. ಗುರುಶಾಂತ್ ಮಾತನಾಡಿದರು.

ವಂಗ ಜನತೆಯ ಧೀರ ನಾಯಕ ಕಾ॥ ಜ್ಯೋತಿಬಸು

ನಿಷ್ಕಾಂತ ಬಸು ಮತ್ತು ಹೇಮಾಲತಾಬಸು ಅವರ ಪುತ್ರ 1914 ಜುಲೈ 8ರಂದು ಜನಿಸಿದ ಕಾಂ. ಜೋತಿಬಸು ಬಂಗಾಳ ಜನತೆಯ ಪ್ರೀತಿಪಾತ್ರ ನಾಯಕರಾಗಿ ದೇಶಕ್ಕೆ ದೇಶವೇ ಬೆರಗಾಗಿ ನೋಡುವಂತಹ ಉಚ್ಛಮಟ್ಟದ ಆಡಳಿತಗಾರರಾಗಿದ್ದಾರೆ. ವಿರೋಧಿಗಳೂ ಕೂಡ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತಹ ಸಾಧನೆಗಳನ್ನು ಮಾಡಿ ತೋರಿಸಿದ್ದಾರೆ.

ಲೊರೆಟ್ಟೊ ಸ್ಕೂಲಿನಲ್ಲಿ ಮೆಟ್ರಿಕ್ಯುಲೇಶನ್ ಮಾಡಿ ಕಲ್ಕತ್ತಾದ ಪ್ರಸಿದ್ಧ ಸೆಂಟ್ ಝೇವಿಯರ್ ಪ್ರಸಿಡೆನ್ಸಿಯಲ್ ಕಾಲೇಜ್‌ನಲ್ಲಿ ಉನ್ನತ ವಿದ್ಯಾಭ್ಯಾಸ ನಡೆಸಿ. ಇಂಗ್ಲಿಷನಲ್ಲಿ ಬಿ.ಎ. ಆನರ್ಸ್ ಮುಗಿಸಿದರು. ವಿದ್ಯಾರ್ಥಿ ದೆಸೆಯಲ್ಲಿ ಭಾರತದ ಸ್ವಾತಂತ್ರ ಹೋರಾಟದತ್ತ ಆಕರ್ಷಿತರಾಗಿದ್ದರು. ಲಂಡನ್‌ನಲ್ಲಿ ಭಾಕ್-ಅಟ್-ಲಾ ಮಾಡುತ್ತಿರುವ ಸಮಯದಲ್ಲೇ ಸಕ್ರೀಯವಾಗಿ ರಾಜಕೀಯದಲ್ಲಿ ಧುಮುಕಿದರು. 1937-40ರ ಸುಮಾರಿನಲ್ಲಿ ಲಂಡನ್ ಭಾರತೀಯ ವಿದ್ಯಾರ್ಥಿಗಳ ಫೆಡರೇಷನ್‌ಮತ್ತು ಇಂಡಿಯನ್ ಲೀಗ್‌ಮತ್ತು ಲಂಡನ್ ಮಜಲೀಸ್ ಸಂಘಟನೆಗಳಲ್ಲಿ ಕೆಲಸ ಮಾಡಿದರು. ಭಾರತದ ಸ್ವಾತಂತ್ರ ಚಳುವಳಿಮತ್ತು ಫ್ಯಾಸಿಸ್ಟ ವಿರೋಧಿ ಹೋರಾಟಗಳ ಪ್ರಾಮುಖ್ಯತೆಯನ್ನು ಬೇರೆ ಬೇರೆ ದೇಶಗಳ ಜನತೆಯ ನಡುವೆ ತಿಳಿಸಿ ಹೇಳುವ ಪ್ರಚಾರಕರಾಗಿ ಕೆಲಸ ಮಾಡಿದರು. 1940 ರಲ್ಲಿ ಲಂಡನ್‌ನಿಂದ ಉನ್ನತ ವಿದ್ಯಾಭ್ಯಾಸ ಮುಗಿಸಿ ಭಾರತಕ್ಕೆ ಬಂದ ಜ್ಯೋತಿಬಸು ಅವರಿಗೆ ಇಲ್ಲಿ ಅತ್ಯುತ್ತಮ ಅವಕಾಶಗಳಿದ್ದರೂ ಅವರು ಕಾರ್ಮಿಕ ವರ್ಗದ ನಡುವೆ ಕಷ್ಟಮಯ ಜೀವನವನ್ನೇ ಆರಿಸಿಕೊಂಡರು.

ಕಮ್ಯೂನಿಸ್ಟ್ ಪಕ್ಷದ ಸದಸ್ಯರಾಗಿ ರೈಲ್ವೆ ಕಾರ್ಮಿಕರನ್ನು ಸಂಘಟಿಸಿದರು. 1946 ರಲ್ಲಿ ಸ್ವಾತಂತ್ರ್ಯಕ್ಕೆ ಮೊದಲೇ ವಿಧಾನ ಸಭೆಗೆ ಚುನಾಯಿತರಾದರು. ವಿಧಾನ ಸಭೆಯಲ್ಲಿ ಸಿ.ಪಿ.ಐ. ಗುಂಪಿನ ನಾಯಕರಾಗಿ ಕೆಲಸ ಮಾಡಿದರು. ಉತ್ತಮ ಸಂಸದೀಯ ಕೆಲಸದಿಂದ ಹಾಗೂ ವಾಕ್ಚಾತುರ್ಯದಿಂದ ಜನರ ಮನಸ್ಸನ್ನು ಗೆದ್ದರು. ಅಲ್ಲಿಂದ ಇಲ್ಲಿಯವರೆಗೂ ನಿರಂತರವಾಗಿ ವಿಧಾನ ಸಭೆಗೆ ಆಯ್ಕೆಯಾಗಿದ್ದಾರೆ. ಆದರೆ 1972ರಿಂದ 1977ರ ವರೆಗಿನ ಕರಾಳ ಆಡಳಿತದಲ್ಲಿ ಅರೇಫ್ಯಾಸಿಸ್ಟ್ ಸರ್ವಾಧಿಕಾರದ ಹಿಂಸಾಕಾಂಡದ ಮಧ್ಯೆ ಚುನಾವಣೆಗಳು ನಡೆದಾಗ ಮಾತ್ರ ಅವರು ಆಯ್ಕೆಯಾಗಲಿಲ್ಲ. 1950ರಿಂದಕಮ್ಯುನಿಸ್ಟ್ ಪಕ್ಷದ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರಾದರು. 1967 ರಿಂದ ಸಿ.ಪಿ.ಐ. [ಎಂ] ನ ಪಾಲಿಟ್‌ಬ್ಯೂರೊ ಸದಸ್ಯರಾಗಿರುವ ಇವರು 1967ರಲ್ಲಿ ಪ.ಬಂಗಾಳದಲ್ಲಿ ಅಧಿಕಾರಕ್ಕೆ ಬಂದ ಸಂಯುಕ್ತರಂಗದಲ್ಲಿ ಉಪ ಮುಖ್ಯಮಂತ್ರಿಯಾಗಿದ್ದರು. ಹಣಕಾಸು ಗೃಹ ಹಾಗೂ ಸಾರಿಗೆ ಸಚಿವರಾಗಿದ್ದರು.

1972ರಿಂದ 1977ರ ಅರೆಪ್ಯಾಸಿಸ್ಟ್‌ದಬ್ಬಾಳಿಕೆ ಹಾಗೂ ತುರ್ತು ಪರಿಸ್ಥಿತಿಯಲ್ಲಿ ಜನರೊಡನೆನಿಂತುಬಹಿರಂಗವಾಗಿ ಹಾಗೂ ಅದು ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ ಭೂಗತರಾಗಿ ಕೆಲಸ ಮಾಡಿದ ಕಾಂ. ಜ್ಯೋತಿಬಸುರವರು 1977 ರಲ್ಲಿ ಅತ್ಯಂತ ಹೆಚ್ಚು ಬಹುಮತದಿಂದ ಎಡರಂಗದ ಜಯಕ್ಕೆ ಕಾರಣರಾದರು.

ಅಂದಿನಿಂದ ಇಂದಿನವರೆಗೂ ಮುಖ್ಯ ಮಂತ್ರಿಗಳಾಗಿ ಅವರ ಸಾಧನೆಗಳು ಪಕ್ಷದ ಪಾಲಿಟ್‌ಬ್ಯೂರೊ ಸದಸ್ಯರಾಗಿ ಪಕ್ಷಕ್ಕೆ ಅವರ ಕಾಣಿಕೆ ಐಕ್ಯರಂಗದ ಓದುಗರಿಗೆ ಸರ್ವವಿದಿತ.

ಕೇರಳ ಜನತೆಯ ಧೀಮಂತ ನಾಯಕ ಕಾ॥ ನಾಯನಾರ್

ಕೇರಳ ಮುಖ್ಯಮಂತ್ರಿ ಸ್ಥಾನವನ್ನು ಎರಡನೇ ಬಾರಿಗೆ ಗಳಿಸಿದ ಎರಂಬಂ ಕೃಷ್ಣನ್ ನಾಯನಾರ್ 1919ರ ನವಂಬರ್ 11ರಂದು ಕಣ್ಣಾನೂರು ಜಿಲ್ಲೆ ಕಲ್ಯಾಶ್ವರಿ ಗ್ರಾಮದಲ್ಲಿ ಜನಿಸಿದರು. ವಿದ್ಯಾರ್ಥಿದೆಸೆಯಲ್ಲಿಯೇ ಓದಿಗೆ ಶರಣು ಹೊಡೆದು ವಿದ್ಯಾರ್ಥಿ ಚಳುವಳಿಯಲ್ಲಿ ಪಾಲ್ಗೊಂಡರು. ಕೆಲವೇ ದಿನಗಳಲ್ಲೇ ಕೇರಳ ವಿದ್ಯಾರ್ಥಿ ಫೆಡರೇಶನ್ ಕಾರ್ಯದರ್ಶಿಯಾದರು. 1940 ರಲ್ಲಿ ಟೆಕ್ಸ್‌ಟೈಲ್ ಮಿಲ್ಲಿನ ಕಾರ್ಮಿಕರ ರಾಜ್ಯವ್ಯಾಪಿ ಮುಷ್ಕರದ ನಾಯಕತ್ವ ವಹಿಸಿದ್ದರು. 'ಮುರಾಳ ರೈತರ ದಂಗೆ' ಸಂದರ್ಭದಲ್ಲಿ ಭೂಗತ ಜೀವನ ನಡೆಸಿದ್ದರು.

ಕಯ್ಯೂರು ಭೂಮಾಲಿಕರ ವಿರುದ್ಧವಾಗಿ ನಡೆದ ಗೇಣಿದಾರರ ಹಾಗು ಮಧ್ಯಮ ರೈತರ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಕಯ್ಯೂರು ಘಟನೆಯ ಆಪಾದಿತರಾದ ಐದು ಜನರಲ್ಲಿ ನಾಯನಾರ್ ರವರೂ ಒಬ್ಬರು. ನಾಯನಾರ್ ಭೂಗತರಾಗಿ ಪೋಲೀಸ್ ಕಣ್ತಪ್ಪಿಸಿದರು. ಹಾಗೆಯೇ ಗಲ್ಲುಶಿಕ್ಷೆಯಿಂದ ಪಾರಾದರು.

1948ರಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ನಿಷೇಧಿಸಿದ್ದಾಗ ಮತ್ತೆ ಭೂಗತ ಜೀವನ 1963, 64 ರಲ್ಲಿ 2 ವರ್ಷಗಳಷ್ಟು ಕಾಲ ಸೆರೆಮನೆವಾಸ. 1951 ರಲ್ಲಿ ಭೂಗತ ಜೀವನದಿಂದ ಹೊರಬಂದ ಮೇಲೆ ಕ್ಯಾಲಿಕಟ್‌ನಲ್ಲಿ ಪಕ್ಷದ ಪತ್ರಿಕೆ 'ದೇಶಾಭಿಮಾನಿ' ಸಂಪಾದಕ ವರ್ಗದಲ್ಲಿ ಸೇರಿದರು.

1967ರ ಲೋಕಸಭಾ ಚುನಾವಣೆಯಲ್ಲಿ ಪಾಲ್ಘಾಟ್ ಕ್ಷೇತ್ರದಿಂದ ಆರಿಸಿಬಂದರು. 1974ರಲ್ಲಿ ಇಡುಕ್ಕಿಯಿಂದ ಶಾಸನ ಸಭೆಗೆ ಸ್ಪರ್ಧಿಸಿ ವಿಜೇತರಾದರು.

1973 ರಲ್ಲಿ ಸಿ. ಎಚ್. ಕಣಾರನ್ ಮರಣದ ನಂತರ ಸಿ. ಪಿ. ಐ. [ಎಂ] ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆಯಾದರು. 1980 ರಲ್ಲಿ ಮುಖ್ಯಮಂತ್ರಿಯಾಗುವವರೆಗೂ ನಾಯನಾರ್ ಕೇರಳ ರಾಜ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದರು. 1958ರಿಂದ ಕೇಂದ್ರ ಸಮಿತಿ ಅಧ್ಯಕ್ಷರಾಗಿ ಮುಂದುವರಿಯುತ್ತಿದ್ದಾರೆ.

ಕಾಂ. ನಾಯನಾರ್ ರಾಜಕೀಯ ರಂಗದಲ್ಲಷ್ಟೆ ಅಲ್ಲ ಸಾಹಿತ್ಯ ರಂಗದಲ್ಲಿ ಸಹ ಪ್ರಸಿದ್ದರು. 'ಪ್ರಗತಿಪರ ಸಾಹಿತ್ಯದ ಅಭಿವೃದ್ಧಿ' 'ಕ್ರಾಂತಿಕಾರಿ ಲೆನಿನ್'', 'ಪ್ರಗತಿಪರ ಸಾಹಿತಾವಲೋಕನ', 'ನನ್ನ ಆತ್ಮಕಥೆ'ಯಂತಹ ಅನೇಕ ಗ್ರಂಥಗಳು ಮತ್ತು ಲೇಖನಗಳನ್ನು ಬರೆದಿದ್ದಾರೆ.

1958 ರಲ್ಲಿ ಶ್ರೀಮತಿ ಶಾರದ ಎಂಬ ಉಪಾಧ್ಯಾಯಿನಿಯನ್ನು ವಿವಾಹವಾದ ಕಾಂ। ನಾಯನಾರ್‌ರವರಿಗೆ ಇಬ್ಬರು ಗಂಡು ಹಾಗೂ ಇಬ್ಬರು ಹೆಣ್ಣು ಮಕ್ಕಳು. ●

ವಿಜಯೋತ್ಸವ ಆಚರಣೆ

ಬೆಂಗಳೂರು

ಪಶ್ಚಿಮ ಬಂಗಾಳ ಮತ್ತು ಕೇರಳ ವಿಧಾನಸಭಾ ಚುನಾವಣಾ ಫಲಿತಾಂಶಗಳು ಸಂಪೂರ್ಣವಾಗಿ ಪ್ರಕಟಗೊಂಡ ಬಳಿಕ ಮಾರ್ಚ್ 27 ರಂದು ಬೆಂಗಳೂರಿನ ಯಶವಂತಪುರ ಪ್ರದೇಶದಲ್ಲಿ ವಿಜಯೋತ್ಸವವನ್ನು ಆಚರಿಸಲಾಯಿತು. ಸಿ ಪಿ ಐ [ಎಂ] ಯಶವಂತಪುರ ಶಾಖೆಯ ತುರ್ತು ಕರೆಯ ಮೇರೆಗೆ ಕಾ. ಮಾರ್ತಾಂಡಪ್ಪನವರ ನೇತೃತ್ವದಲ್ಲಿ ನೂರಕ್ಕೂ ಹೆಚ್ಚು ಕಾರ್ಮಿಕರು ಮತ್ತು ಪಕ್ಷದ ಬೆಂಬಲಿಗರು ಧಾವಿಸಿ ಮೆರವಣಿಗೆಯಲ್ಲಿ ಪಾಲ್ಗೊಂಡರು. ಪಟಾಕಿಗಳನ್ನು ಸಿಡಿಸುತ್ತಾ ಹರ್ಷೋದ್ಗಾರದ ಘೋಷಣೆಗಳೊಂದಿಗೆ ಮುಖ್ಯ ರಸ್ತೆಗಳಲ್ಲಿ ಸಾಗಿದರು. ನಂತರ ಯಶವಂತಪುರ ಮಾರ್ಕೆಟ್ ಸಮೀಪದಲ್ಲಿ ಜರುಗಿದ ಸಾರ್ವಜನಿಕ ಸಭೆಯಲ್ಲಿ ಸಿ. ಪಿ. ಐ. [ಎಂ] ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯರಾದ ಕಾಂ. ವಿ. ಜೆ. ಕೆ ನಾಯರ್ ಮತ್ತು ಕಾಂ. ಎನ್. ಕೆ. ಉಪಾಧ್ಯಾಯ ಹಾಗೂ ಶಾಸಕಾಂಗ ಪಕ್ಷದ ನಾಯಕರಾದ ಆರ್. ವೆಂಕಟರಾಮಯ್ಯ, ಎಸ್. ಎಫ್. ಐ. ರಾಜ್ಯ ಕಾರ್ಯದರ್ಶಿ ಎಸ್. ಆರ್. ಆರಾಧ್ಯ, ಡಿ. ವೈ. ಎಫ್. ಐ. ರಾಜ್ಯ ಕಾರ್ಯದರ್ಶಿ ಎಸ್. ಶಿವರಾಂರವರು ಮಾತನಾಡಿದಗು. ಪಕ್ಷದ ಯಶವಂತಪುರ ಶಾಖೆ ಕಾರ್ಯದರ್ಶಿ ಕಾಂ. ಸುಬ್ಬಯ್ಯ ಅಧ್ಯಕ್ಷತೆ ವಹಿಸಿದ್ದರು. ಕಾಂ. ರಾಜು ಪ್ರಾರಂಭದಲ್ಲಿ ಸ್ವಾಗತಿಸಿದರು.

ಎಡರಂಗ ಮತ್ತು ಎಡ ಪ್ರಜಾಪ್ರಭುತ್ವ ರಂಗದ ವಿಜಯವು ಕೇವಲ ಆ ರಾಜ್ಯಗಳ ಜನತೆಯ ಜಯ ಮಾತ್ರವಲ್ಲ, ಇಡೀ ದೇಶದ ಜಾತ್ಯಾತೀತ-ಪ್ರಜಾಪ್ರಭುತ್ವ ಶಕ್ತಿಗಳ ಜಯವೆಂದು ಕಾಂ. ಉಪಾಧ್ಯಾಯ ವಿವರಿಸಿದರು.

ದೇಶದ ಸ್ವಾತಂತ್ರ್ಯ ಮತ್ತು ಸಮಗ್ರತೆಗೆ ಅಪಾಯ ತಂದೊಡ್ಡಿರುವ ಕಾಂಗ್ರೆಸ್ [ಐ] ನ ಸಂದರ್ಭಸಾಧಕ ನೀತಿಯನ್ನು ವಿವರಿಸಿದ ಕಾಂ. ವಿಜೆಕೆ ನಾಯರ್‌ರವರು ಅಮೇರಿಕನ್ ಸಾಮ್ರಾಜ್ಯಶಾಹಿಯು ಭಾರತವನ್ನು ಛಿದ್ರಗೊಳಿಸಲು ಹೂಡಿರುವ ಒಳಸಂಚಿನ ಬಗ್ಗೆ ಜನತೆಯು ಎಚ್ಚರವಹಿಸಬೇಕೆಂದು ತಿಳಿಸಿದರು.

ದಕ್ಷಿಣ ಕನ್ನಡ ಜಿಲ್ಲೆ

ಮಾರ್ಚ್ 23 ರಂದು ಜರುಗಿದ ವಿಧಾನ ಸಭಾ ಚುನಾವಣೆಗಳಲ್ಲಿ ಕೇರಳದಲ್ಲಿ ಸಿ.ಪಿ.ಐ. (ಎಂ) ನೇತೃತ್ವದ ಎಡ ಪ್ರಜಾಪ್ರಭುತ್ವ ರಂಗವನ್ನೂ ಪಶ್ಚಿಮ ಬಂಗಾಳದಲ್ಲಿ ಸಿ.ಪಿ.ಐ. (ಎಂ) ನೇತೃತ್ವದ ಎಡರಂಗವನ್ನೂ ಪ್ರಚಂಡ ಬಹುಮತದಿಂದ ಆರಿಸಿ ಅಧಿಕಾರಕ್ಕೆ ತಂದ ಈ ಎರಡುರಾಜ್ಯಗಳ ಮತದಾರರನ್ನೂ ಮಹಾ ಜನತೆಯನ್ನೂ ಸಿ.ಪಿ.ಐ.(ಎಂ) ದ.ಕ. ಜಿಲ್ಲಾ ಸಮಿತಿಯ ಕಾರ್ಯದರ್ಶಿ ಮಂಡಳಿಯು ಹೃತ್ಪೂರ್ವಕವಾಗಿ ಅಭಿನಂದಿಸಿದೆ. ಮಾರ್ಚ್ 25 ರಂದು ಸಭೆ ಸೇರಿದ ಕಾರ್ಯದರ್ಶಿ ಮಂಡಳಿಯು ಈ ಬಗ್ಗೆ ನಿರ್ಣಯವೊಂದನ್ನು ಅಂಗೀಕರಿಸಿದ್ದು, ಈ ಮಹಾನ್ ವಿಜಯವು ಇಡೀ ದೇಶದ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ವಿಜಯವೆಂದು ಜಿಲ್ಲಾ ಸಮಿತಿಯ ಪರವಾಗಿ ಪತ್ರಿಕಾ ಹೇಳಿಕೆ ನೀಡಿದ ಕಾರ್ಯದರ್ಶಿ ಕಾಂ. ಕೆ.ಆರ್. ಶ್ರೀಯಾನ್ ನೀಡಿದ ತಿಳಿಸಿದ್ದಾರೆ.

ತುಮಕೂರು ಜಿಲ್ಲೆ

ದಿನಾಂಕ. 28-3-87 ರಂದು ತುಮಕೂರು ಜಿಲ್ಲಾ ಮಾರ್ಕ್ಸವಾದಿ ಕಮ್ಯುನಿಸ್ಟ್ ಪಕ್ಷದ ಸಭೆಯು ಕಾ.ಟಿ.ಕೆ. ಗೋವಿಂದರಾಜು ಅಧ್ಯಕ್ಷತೆಯಲ್ಲಿ ಸೇರಿ ಪ್ರತಿಗಾಮಿ ಛಿದ್ರಕಾರಿ ಜಾತೀಯ ಮೂಲಭೂತವಾದಿಗಳಿಗೆ ಮಣ್ಣುಮುಕ್ಕಿಸಿದ ಕೇರಳ-ಪಶ್ಚಿಮ ಬಂಗಾಳದ ಜನತೆಗೆ ತನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿತೆಂದು ರಾಜ್ಯ ಸಮಿತಿ ಸದಸ್ಯ ಕಾಂ. ಕೆ.ಆರ್. ನಾಯಕ್ ತಿಳಿಸಿದ್ದಾರೆ.

ಎಸ್. ಎಫ್. ಐ. ಅಭಿನಂದನೆ

ಪಶ್ಚಿಮ ಬಂಗಾಳ ಹಾಗೂ ಕೇರಳದಲ್ಲಿ ಎಡರಂಗ ಮತ್ತು ಪ್ರಜಾಸತ್ತಾತ್ಮಕ ರಂಗವು ಪ್ರಚಂಡ ವಿಜಯಗಳಿಸಿರುವುದನ್ನು ಭಾರತ ವಿದಾರ್ಥಿ ಫೆಡರೇಷನ್ (ಎಸ್.ಎಫ್.ಐ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿಯು ಅಭಿನಂದಿಸಿದೆ. ಇದು ಕರ್ನಾಟಕ ರಾಜ್ಯದಲ್ಲೂ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಬೆಳವಣಿಗೆಗೆ ಸಹಾಯಕವಾಗಲೆಂದು ಎಸ್.ಎಫ್.ಐ ಆಶಿಸುತ್ತದೆ. ○

ವಿಚಾರ ಸಂಕಿರಣ : ರೈತರ ಚಳುವಳಿ ಕುರಿತು

ಎಸ್.ಎಫ್.ಐ. ಮೈಸೂರು ಜಿಲ್ಲಾ ಸಮಿತಿ 22-3-87ರಂದು ಮಾನಸ ಗಂಗೋತ್ರಿಯ ಮಾನವಿಕ ಸಭಾಂಗಣದಲ್ಲಿ "ರೈತ ಚಳುವಳಿ ಮತ್ತು ಜನತಾ ಪ್ರಜಾಪ್ರಭುತ್ವ ಕ್ರಾಂತಿ" ಕುರಿತು ವಿಚಾರ ಸಂಕಿರಣ ಏರ್ಪಡಿಸಿತ್ತು.

ಬೆಳಗಿನ ಗೋಷ್ಠಿಯನ್ನು ಡಾ॥ಎಸ್ ಚಂದ್ರಶೇಖರ್‌ರವರು ಈ ವಿಚಾರ ಸಂಕಿರಣವನ್ನು ಉದ್ಘಾಟಿಸುತ್ತಾ ಕರ್ನಾಟಕದಲ್ಲಿ ರೈತ ಚಳವಳಿಗಳು ನಡೆದು ಬಂದ ದಾರಿಯನ್ನು ವಿವರಿಸಿದರು. ಯಾವುದೇ ಚಳುವಳಿ ಅದರ ತಾತ್ವಿಕ ತಳಹದಿ ಹಾಗೂ ಅದರ ನಾಯಕತ್ವದ ಮೇಲೆ ಅವಲಂಬಿಸಿದೆ ಎಂದರು.

ಕಾ॥ಜಿ.ವಿ. ಶ್ರೀರಾಮರೆಡ್ಡಿಯವರು "ಭಾರತ ರೈತ ಚಳುವಳಿಗಳ ವರ್ಗ ನೆಲೆಗಳು" ವಿಷಯದ ಕುರಿತು ಪ್ರಬಂಧ ಮಂಡಿಸುತ್ತ ಇಡೀ ಭಾರತ ದೇಶದಲ್ಲಿ ರೈತ ಚಳುವಳಿಗಳು ಅವರ ಬೇಡಿಕೆಗಳ ಆಧಾರದ ಮೇಲೆ ಆಯಾ ಚಳುವಳಿಗಳ ವರ್ಗ ನೆಲೆಗಳನ್ನೂ ವಿವರಿಸಿದರು. ಇಡೀ ಭಾರತ ದೇಶದ ಉದ್ದಗಲಕ್ಕೂ ಹರಡಿದ ರೈತರ ಚಳುವಳಿಗಳ ಸುದೀರ್ಘ ವಿವರಣೆ ನೀಡಿದರು

ಈ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಎಸ್.ಎಫ್.ಐ. ರಾಜ್ಯ ಅಧ್ಯಕ್ಷರಾದ ಕಾ॥ ಆರ್. ಜಯಕುಮಾರ್‌ರವರು ವಿದ್ಯಾರ್ಥಿಗಳಿಗೂ ಹಾಗೂ ಪ್ರಜಾಪ್ರಭುತ್ವ ಚಳುವಳಿಗೂ ಇರುವ ಸಂಬಂಧವನ್ನು ವಿವರಿಸಿದರು. ಭೂಮಾಲಕ, ಜಮೀನುದಾರರ ಹಿಡಿತದಲ್ಲಿ ಬೆಳೆಯುತ್ತಿರುವ ರೈತ ಚಳುವಳಿಗಳು ಯುವ ಜನತೆಯನ್ನೂ ತಪ್ಪುದಾರಿಗೆ ಎಳೆಯುತ್ತಿರುವುದರ ಕುರಿತು ಎಚ್ಚರಿಸಿದರು.

ಆರಂಭದಲ್ಲಿ ಮೋಹನ ಕುಮಾರ್ ರವರುಸ್ವಾಗತ ಬಯಸಿದ್ದರು. ಕಾ॥ಬಸವರಾಜರವರಿಂದ ವಂದನಾರ್ಪಣೆ ಆಯಿತು.

ಮಧ್ಯಾಹ್ನದ ಗೋಷ್ಠಿಯಲ್ಲಿ ಕಾ। ಜಿ.ಎನ್. ನಾಗರಾಜ್‌ರವರು "ಕರ್ನಾಟಕದಲ್ಲಿ ಕೃಷಿ ಸಂಬಂಧಗಳ ಬದಲಾವಣೆಗಳು ಮತ್ತು ರೈತ ಚಳುವಳಿಗಳು" ಎಂಬ ವಿಷಯವಾಗಿ ಪ್ರಬಂಧ ಮಂಡಿಸುತ್ತಾ ಶೇ.7ರಷ್ಟಿದ್ದ ಕೃಷಿ ಕಾರ್ಮಿಕರ ಸಂಖ್ಯೆ ಈಗ ಶೇ.35ರಷ್ಟು ಬೆಳೆದದ್ದನ್ನು ಆಳುವ ವರ್ಗಗಳು ಕೈಗೊಂಡ ಭೂಸುಧಾರಣೆ. ಹಾಗೂ ಬಂಡವಾಳಶಾಹಿ ಕೃಷಿ ಸಂಬಂಧಗಳ ಫಲ ಎಂದು ತಿಳಿಸಿದರು.

"ರೈತ ಚಳುವಳಿ ಮತ್ತು ಸಾಮಾಜಿಕ ಬದಲಾವಣೆ" ವಿಷಯದ ಕುರಿತು ಕಾ॥ ಪಿ. ರಾಮಚಂದ್ರರಾವ್‌ರವರು ಮಾತನಾಡುತ್ತಾ ಭಾರತ ದೇಶ ವಿಶ್ವ ಮಾರುಕಟ್ಟೆಯ ಭಾಗವಾಗಿರುವುದರಿಂದ, ರೈತರು ಅನುಭವಿಸಿದ ಸಂಕಷ್ಟಗಳನ್ನು ವಿವರಿಸುತ್ತಾ ಈ ದೇಶವನ್ನು ಭೂಮಾಲಕ,ಬಂಡವಾಳಶಾಹಿ ಹಾಗೂ ಸಾಮ್ರಾಜ್ಯಶಾಹಿಗಳ ಹಿಡಿತದಿಂದ ಮುಕ್ತಗೊಳಿಸದ ಹೊರತು ರೈತರ ಸಮಸ್ಯೆಬಗೆಹರಿಸಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಮೈಸೂರು ವಿ.ವಿ.ಯ ಸಹಾಯಕ ರಿಜಿಸ್ಟ್ರರ್ ಶ್ರೀರಾಮಪ್ಪನವರು ಈ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಕಾ॥ ಮುಕ್ಬಿಲ್‌ಗೋಷ್ಠಿಯ ಸ್ವಾಗತ ಕೋರಿದರೆ ಕಾ॥ಕುಮಾರಸ್ವಾಮಿ ವಂದನಾರ್ಪಣೆ ಮಾಡಿದರು.

ಗೊರ್ಬಚೇವರ ಅಪೂರ್ವ ಪ್ಲೀನಮ್ ಭಾಷಣ

ಸ್ಥಗಿತತೆಯನ್ನು ನಿವಾರಿಸಲು ಸಮಾಜದ, ಪಕ್ಷದ ಪುನರ್ ಸಂಘಟನೆ

ಘಂಟಾರವ ಮೊಳಗುತಿದೆ

–ಪೀಪಲ್ಸ್ ಡೆಮಾಕ್ರಸಿಯಿಂದ

ಬೊಲ್ಷೆವಿಕ್ ಎಂಬ ಹೆಸರಿಗೆ ಅರ್ಹವಾದ ಆಮೂಲಾಗ್ರ ಕೂಲಂಕಷ ವಿವೇಚನೆಯನ್ನು ಪ್ರಯೋಗಿಸಿ ಸೋವಿಯತ್ ಕಮ್ಯೂನಿಸ್ಟ್ ಪಕ್ಷ ವಿಶ್ವ ಹಾಗೂ ಸೋವಿಯತ್ ಒಕ್ಕೂಟದ ಪರಿಸ್ಥಿತಿಯನ್ನು ವಿಮರ್ಶಿಸುತ್ತಿದೆ. ಸಿ.ಪಿ.ಎಸ್. ಯು. ಕೇಂದ್ರ ಸಮಿತಿಯು 1985ರ ಪ್ಲೀನಂ, 27ನೇ ಮಹಾಧಿವೇಶನ ಮತ್ತು ಇತ್ತೀಚೆಗೆ ಮರುಸಂಘಟನೆ ಮತ್ತು ಸಿಬ್ಬಂದಿ ಬಗ್ಗೆ ಪಕ್ಷದ ಧೋರಣೆಗೆ ಕುರಿತ ಕೇಂದ್ರ ಸಮಿತಿಯ ಪ್ಲೀನಂ ಸಭೆಯ ಕಲಾಪಗಳಿಂದ ಸತತವಾಗಿ ಈ ಪರಾಮರ್ಶೆ ಶ್ರೀಮಂತಗೊಳ್ಳುತ್ತಿದೆ. ಸಮಾಜವಾದದ ಭವಿಷ್ಯದ ಮೇಲೆ ಹಾಗೂ ಜಗತ್ತಿನಾದ್ಯಂತ ಕಾರ್ಮಿಕ ವರ್ಗದ ಹೋರಾಟಗಳ ಮೇಲೆ ಆಳವಾದ ಪ್ರಭಾವ ಬೀರಲಿವೆ.

ಇಡಿ ಮಾನವತೆ ಬಂಡವಾಳಶಾಹೀ ಪದ್ಧತಿಯಿಂದ ಸಮಾಜವಾದದತ್ತ ಸಾಗುತ್ತಿರುವ ಈ ಯುಗದಲ್ಲಿ ಸಮಾಜವಾದಿ ಸೋವಿಯತ್ ಒಕ್ಕೂಟದ ಶಕ್ತಿ ಒಂದು ನಿರ್ಣಾಯಕ ಅಂಶ. ಈ ಶಕ್ತಿ ಸೋವಿಯತ್ ಒಕ್ಕೂಟದಲ್ಲಿ ಸಮಾಜವಾದದ ಅಂತರಿಕ ಶಕ್ತಿಯ ಮೇಲೆಯೇ ಬಹಳಷ್ಟು ಅವಲಂಬಿತವಾಗಿದೆ. ಈ ಎಲ್ಲಾ ಚರ್ಚೆ ಹಾಗೂ ಸುಧಾರಣೆಗಳನ್ನು ನಡೆಸಿಕೊಂಡು ಬಂದಿರುವ ಸಿ.ಪಿ.ಎಸ್.ಯು ಸೋವಿಯತ್ ಒಕ್ಕೂಟದಲ್ಲಿ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯನ್ನು ತೀವ್ರಗೊಳಿಸುವುದು ತನ್ನ ಪ್ರಧಾನ ಗುರಿಯೆಂದು ವಿಶದಪಡಿಸಿದೆ. ಈ ಉದ್ದೇಶ ಸಾಧನೆಗೆ ಆರ್ಥಿಕತೆಯ ಆಮೂಲಾಗ್ರ ಸುಧಾರಣೆ ಮಾತ್ರವಲ್ಲದೆ ಸಮಾಜವನ್ನು ಪುನರುಜ್ಜೀವನಗೊಳಿಸುವ ಅದರ ಜೊತೆಯಲ್ಲಿಯೇ ಸೋವಿಯತ್ ಸಮಾಜದ ಮುಂಚೂಣಿಯಾದ ಕಮ್ಯುನಿಸ್ಟ್ ಪಕ್ಷವನ್ನೂ ಪುನರ್ಸಂಘಟಿಸುವುದು ಅಗತ್ಯ. ಈ ಅಂಶವನ್ನು ಜನವರಿ ಪ್ಲೀನಂ ಅನ್ನು ಆರಂಭಿಸಿದ ಕಾಂ. ಗೋರ್ಬಚೇವರು ವಿವರಿಸಿದ್ದಾರೆ.

ಗೋರ್ಬಚೇವರ ಈ ಭಾಷಣ ಎಲ್ಲಾ ಮಾರ್ಕ್ಸ್‌ವಾದಿ–ಲೆನಿನ್‌ವಾದಿಗಳಿಗೆ ಮಹತ್ವಪೂರ್ಣವಾದ ಹಲವಾರು ಅಂಶಗಳನ್ನು ಚರ್ಚಿಸಿದೆ. ಮಾರ್ಕ್ಸ್‌ವಾದಿ–ಲೆನಿನ್‌ವಾದೀ ದೃಷ್ಟಿಕೋನಕ್ಕೆ ತಕ್ಕಂತೆ ಈ ವಿಶ್ಲೇಷಣೆಯ ಹರಹು ಬಹು ವ್ಯಾಪಕ. ಸಿದ್ಧಾಂತ ಮತ್ತು ಆಚರಣೆಯ ನಡುವಿನ ಪರಸ್ಪರ ಅವಲಂಬನೆಯಿಂದ ಹಿಡಿದು ಒಂದು ಸಮಾಜವಾದೀ ದೇಶದೊಳಗಿನ ವೈರುಧ್ಯಗಳು ಹೇಗಿರುತ್ತವೆ, ಸಮಾಜವಾದೀ ಆರ್ಥಿಕ ನೀತಿಗಳ ಜಾರಿಯಲ್ಲಿ ಮೂಡಿ ಬಂದ ವಿಕೃತಿಗಳೇನು? ಸಮಾಜವಾದೀ ಮಾನವನ ಹಾಗೂ ಮಾರ್ಕ್ಸ್‌ವಾದೀ ನೈತಿಕತೆಯ ನಿರ್ಮಾಣದಲ್ಲಿನ ಪ್ರಶ್ನೆಗಳು, ಸಮಾಜವಾದದಡಿ ರಾಷ್ಟ್ರೀಯತೆಯ ಪ್ರಶ್ನೆ ಸಾಮ್ರಾಜ್ಯಶಾಹಿಯ ವಿರುದ್ಧ ಅಂತರಾಷ್ಟ್ರೀಯ ವರ್ಗಹೋರಾಟಗಳು ಹಾಗೂ ಪಕ್ಷದ ಪುನರ್ಸಂಘಟನೆಯ ಸಮಸ್ಯೆಗಳು ಮತ್ತು ಹೊಸ ಕೇಡರ್ ನೀತಿಯವರೆಗೆ ಹಲವಾರು ಅಂಶಗಳನ್ನು ಇದು ಚರ್ಚಿಸಿದೆ.

ಈ ಎಲ್ಲಾ ಪ್ರಶ್ನೆಗಳ ಮತ್ತು ಅವುಗಳಿಂದಾಗಿ ಕಾರ್ಯಾನ್ವಯದ ನೀತಿಯಲ್ಲಿ ಉಂಟಾಗಬೇಕಾಗಿರುವ ಬದಲಾವಣೆಗಳ ತಿಳುವಳಿಕೆ ಜಗತ್ತಿನಾದ್ಯಂತ ಕಾರ್ಮಿಕವರ್ಗದ ಆಂದೋಲನಗಳಿಗೆ ತಕ್ಷಣವೂ ಹಾಗೂ ದೀರ್ಘಾವಧಿಯ ದೃಷ್ಟಿಯಿಂದಲೂ ಮಹತ್ವದ್ದು. ಗೊರ್ಬಚೆವ್‌ರ ಭಾಷಣದ ಹಲವಾರು ಅಂಶಗಳ ಬಗ್ಗೆ ಇನ್ನಷ್ಟು ವಿಶದೀಕರಣ ಬೇಕು ಎಂದೆನಿಸಬಹುದು. ಆದರೆ ಗೊರ್ಬಚೆವ ರವರೇ ಹೇಳುವಂತೆ ಪುನರ್ಸಂಘಟನೆಯ ಕೆಲಸ ಈಗಷ್ಟೇ ಆರಂಭವಾಗಿದೆ.

ಎಲ್ಲಾ ಮಾರ್ಕ್ಸ್‌ವಾದಿ–ಲೆನಿನ್‌ವಾದಿಗಳು ಮತ್ತು ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯತೆಯ ಸಮರ್ಥಕರು ಸೋವಿಯತ್ ಒಕ್ಕೂಟದಲ್ಲಾಗುತ್ತಿರುವ ಆಳವಾದ ಪರಿವರ್ತನೆಗಳ ಸರಿಯಾದ ತಿಳುವಳಿಕೆ ಹೊಂದಿರುವುದು ಅಗತ್ಯ.

ಇನ್ನೊಂದು ಕುತೂಹಲಕಾರೀ ಅಂಶವಿದೆ. ಅದೆಂದರೆ ಈ ಬದಲಾವಣೆಗಳಿಗೆ ಪಾಶ್ಚಿಮಾತ್ಯ ದೇಶಗಳಲ್ಲಿ ಮತ್ತು ಅಲ್ಲಿನ ಸುದ್ದಿ ಮಾಧ್ಯಮಗಳಲ್ಲಿ ಕಂಡುಬರುತ್ತಿರುವ ಪ್ರತಿಕ್ರಿಯೆ: ಅವೆಲ್ಲದರ ಸಾರಾಂಶವಿಷ್ಟೇ–ಸಾಮ್ರಾಜ್ಯಶಾಹಿಗಳು ಮತ್ತು ಅದರ ಸಿದ್ಧಾಂತಿಗಳು ಅತ್ಯಂತ ಕಸಿವಿಸಿಗೊಂಡಿದ್ದಾರೆ. ಕಳೆದ ನಾಲ್ಕು ದಶಕಗಳಲ್ಲಿ ಸೋವಿಯತ್ ಒಕ್ಕೂಟದ ಆರ್ಥಿಕ ಮತ್ತು ಸೈನಿಕ ಶಕ್ತಿ ಸಾಮ್ರಾಜ್ಯಶಾಹಿಯವಿರುದ್ಧ ಒಂದು ಅಭೇದ್ಯ ಕೋಟೆಯಾಗಿ ನಿಂತಿದೆ. ಇನ್ನೂ ಹೆಚ್ಚು ಉತ್ಸಾಹಭರಿತ, ಚಲನಶೀಲ ಸಮಾಜವಾದ ವಿಶ್ವಾದ್ಯಂತ ಶಕ್ತಿಶಾಲೀ ಅಲೆಗಳನ್ನು ಉಂಟುಮಾಡಬಹುದು, ತನ್ಮೂಲಕ ಸಾಮ್ರಾಜ್ಯಶಾಹಿಯ ಅವಸಾನದ ಮೊಳಗಿಸಬಹುದು: ರೇಕ್ಜಾವಿಕ್ ಶೃಂಗ ಸಭೆ ಮತ್ತು ನಂತರದ ಸೋವಿಯತ್ ಶಾಂತಿಪ್ರಸ್ತಾಪಗಳು, ಇತ್ತೀಚಿನ ಬುದ್ಧಿ ಜೀವಿಗಳು ಹಾಗೂ ಇತರ ಗಣ್ಯವ್ಯಕ್ತಿಗಳ ಅಂತರರಾಷ್ಟ್ರೀಯ ವೇದಿಕೆಯ ಕಲಾಪಗಳಿಂದ ವಿಶ್ವಾದ್ಯಂತ ಸಾರ್ವಜನಿಕ ಅಭಿಪ್ರಾಯದಲ್ಲಿ ಎದ್ದು ಕಾಣುತ್ತಿರುವ ಬದಲಾವಣೆಗಳಲ್ಲಿ ಇದು ಸ್ಪಷ್ಟವಾಗಿಗೋಚರಿಸುತ್ತಿದೆ,

—ಘಂಟಾರವವನ್ನೇ ಮಾರ್ಚ್ 22 1987

ಜನವರಿ 23ರಂದು ನಡೆದ ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಕೇಂದ್ರಸಮಿತಿಯ ಪ್ಲೀನಂನಲ್ಲಿ ವಿಶ್ವದ ಎಲ್ಲಾ ಕಮ್ಯುನಿಸ್ಟ್‌ರಿಗೂ ಮಹತ್ವ ಪೂರ್ಣವಾದ ವರದಿಯನ್ನು ಕಾಂ. ಗೊರ್ಬಚೆವ್ ಮಂಡಿಸಿದರು.

ಸೋವಿಯತ್ ಸಮಾಜದ ಹಾಗೂ ಪಕ್ಷದ ಪುನರ್ಸಂಘಟನೆಯ ಆಧಾರವನ್ನು ವಿವರಿಸುತ್ತಾ ಕಾ. ಗೊರ್ಬಚೆವ್ ರವರು “ಒಂದು ಘಟ್ಟದಲ್ಲಿ ದೇಶ ತನ್ನ ಚೈತನ್ಯ ಶೀಲ ವೇಗವನ್ನು ಕಳೆದುಕೊಳ್ಳಲಾರಂಭಿಸಿತು, ಸಂಕಷ್ಟಗಳು, ಬಗೆಹರಿಸದ ಸಮಸ್ಯೆಗಳು ಒಂದರ ಮೇಲೊಂದು ಪೇರಿಸುತ್ತಾ ಹೋದವು. ಸಮಾಜವಾದಕ್ಕೆ ಹೊರತಾದ ಸ್ಥಗಿತತೆಯ ಅಂಶಗಳು ಹಾಗೂ ಇನ್ನಿತರ ಸಂಗತಿಗಳು ಕಾಣಲಾರಂಭಿಸಿದುವು ಇವೆಲ್ಲಾ ದೇಶದ ಆರ್ಥಿಕತೆಯನ್ನು ಸಾಮಾಜಿಕ, ಬೌದ್ಧಿಕ ಜೀವನವನ್ನು ಕಂಗೆಡಿಸಿದುವು ಎಂದರು”.

“ಕೋಟ್ಯಾಂತರ ಸೋವಿಯತ್‌ಜನತೆಯ ಹಾಗೂ ಪಕ್ಷದ ಅನೇಕ ಸಂಘಟನೆಗಳ ಹಾಗೂ ನಮ್ಮ ಕಾರ್ಯಕರ್ತರ ಪ್ರಾಮಾಣಿಕ ಶ್ರಮದಿಂದ ಈ ಎಲ್ಲಾ ನಕಾರಾತ್ಮಕ ಬೆಳವಣಿಗೆಯನ್ನು ಹಿಂದೆ ಳಿದು ನಿಲ್ಲಿಸುವುದು ಸಾಧ್ಯವಾಯಿತು. ಆದರೆ ಅದನ್ನು ಪೂರ್ತಿಯಾಗಿ ತಡೆಯಲಾಗಲಿಲ್ಲ” ಎಂದರು.

ಈ ಸ್ಥಿತಿಯಿಂದ ಬದಲಾವಣೆಗಳು ಬಹಳ ನಿಧಾನಗತಿಯಲ್ಲಿ ಸಾಗುತ್ತಿವೆ ಪುನರ್ಸಂಘಟನೆಯ ಕೆಲಸ ಹೆಚ್ಚು ಕಷ್ಟಕರವಾಗುತ್ತಿವೆ. ಸಮಸ್ಯೆಗಳು ನಾವು ಮೊದಲು ಯೋಚಿಸಿದ್ದುದಕ್ಕಿಂತ ಆಳವಾದ ಬೇರಿಳಿಸಿವೆ.

ಇಂತಹ ಪರಿಸ್ಥಿತಿಗೆ, 1970ಹಾಗೂ 1980ರ ದಶಕಗಳಲ್ಲಿನ ಸ್ಥಗಿತತೆಗೆ ಕಾರಣಗಳೇನು? ಅಂದು ನಡೆದುದೇನು? ಎಂಬುದನ್ನು ವಿವರವಾಗಿ ಪರಿಶೀಲಿಸಬೇಕಾಗಿದೆ.

ಅಂದಿನ ಪರಿಸ್ಥಿತಿಗೆ ಮುಖ್ಯಕಾರಣ: ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಕೇಂದ್ರಸಮಿತಿ ಮತ್ತು ದೇಶದ ನಾಯಕತ್ವ ವ್ಯಕ್ತಿನಿಷ್ಠ ಕಾರಣಗಳಿಗಾಗಿ ಬದಲಾವಣೆಯ ಅವಶ್ಯಕತೆಯನ್ನು ಸಂಪೂರ್ಣವಾಗಿ ಸಕಾಲದಲ್ಲಿ ಕಂಡುಕೊಳ್ಳಲು ವಿಫಲವಾಗಿದ್ದು-ಸಮಾಜದಲ್ಲಿನ ಅಪಾಯಕಾರಿ ಬಿಕ್ಕಟ್ಟನ್ನು ಗುರಿ ಗುರುತಿಸಲು ಅವುಗಳನ್ನು ನಿವಾರಿಸುವ ಸ್ಪಷ್ಟ ನೀತಿ ನಿರೂಪಣೆ ಮಾಡಲು ವಿಫಲವಾದದ್ದು.

ಲೆನಿನ್ ರವರು ನಮಗೆ ಕಲಿಸಿಕೊಟ್ಟ “ತತ್ವದ ಮೌಲ್ಯವಿರುವುದೇ ವಾಸ್ತವ ಪರಿಸ್ಥಿತಿಯಲ್ಲಿರುವ ಎಲ್ಲಾ ವೈರುಧ್ಯಗಳ ಖಚಿತ ಚಿತ್ರಣವನ್ನು ನೀಡುವುದರಲ್ಲಿ” ಎಂಬ ಪಾಠವನ್ನು ಅನೇಕ ಬಾರಿ ಸುಮ್ಮನೆ ಕಡೆಗಣಿಸಲಾಯಿತು.

1930–40ರ ದಶಕಗಳಲ್ಲಿ, ಸಮಾಜ ಪೂರ್ಣವಾಗಿ ಬೇರೆಯದೇ ಆದ ಸಮಸ್ಯೆಗಳನ್ನು ಎದುರಿಸುತ್ತಿದ್ದಾಗ ಮಾಡಿದ ತಾತ್ವಿಕ ಪರಿಕಲ್ಪನೆಗಳು ಬದಲಾವಣೆಯಾಗದೇ ಹಾಗೆಯೇ ಉಳಿದವು.

ಆಗಿನ ಕಾರ್ಯನಿರ್ವಹಣೆಯಲ್ಲಿ ಉದ್ಭವಿಸಿದ್ದ ಸಮಾಜದ ಸಂಘಟನಾ ರೂಪಗಳನ್ನು ನಿರಂತರವೆಂದು, ಶಾಶ್ವತವೆಂದು ಪರಿಗಣಿಸಲಾಯಿತು. ಸಮಾಜವಾದಿ ಉತ್ಪಾದನಾ ಸಂಬಂಧಗಳ ಬಗ್ಗೆ ವಿಕಾಕವಾದ ಪರಿಕಲ್ಪನೆಗಳು ಕಾಣಿಸಿಕೊಂಡವು. ಉತ್ಪಾದನಾ ಶಕ್ತಿಗಳೊಡನೆ ಇವುಗಳ ಗತಿತಾರ್ಕಿಕ ಸಂಬಂಧಗಳಿಗೆ ಸರಿಯಾದ ಬೆಲೆ ಕಟ್ಟಲಿಲ್ಲ. ಸಮತಾವಾದದ ಬಗ್ಗೆ ಬೋಟಾ ಕಲ್ಪನೆಗಳು ವಾಸ್ತವಕ್ಕೆ ಸಂಬಂಧವಿಲ್ಲದ ಕಾರಣಿಕ [ಭವಿಷ್ಯ]ಗಳು, ಅಭಿಪ್ರಾಯಗಳು ಜನರ ನಂಬಿಕೆಯನ್ನು ಗಳಿಸಿದವು.

ತತ್ವಕ್ಕೆ ಸಂಬಂಧಿಸಿದ ಈ ಸ್ಥಗಿತತೆಯಿಂದ ವಾಸ್ತವಿಕ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ತೊಂದರೆಯಾಯಿತು. ಗತಕಾಲದ ಪದ್ಧತಿಗಳನ್ನು ದಶಕಗಳ ಕಾಲ ಸಮಾಜದ ನಿರ್ವಹಣೆಯಲ್ಲಿ ಬಳಸಲಾಯಿತು. ಆದರೆ ಸಮರ್ಥ ಆರ್ಥಿಕ ರೂಪಗಳನ್ನು ಕಾರಣವೇ ಇಲ್ಲದೆ ನಿರಾಕರಿಸಲಾಯಿತು.

ಸಮಾಜವಾದಿ ಆಸ್ತಿಯ ಬಗ್ಗೆ ವಿಶೇಷವಾಗಿ ನಮೂದಿಸಬೇಕಾಗಿದೆ. ಇಲಾಖಾ ಮನೋಭಾವ, ಸಂಕುಚಿತ ದೃಷ್ಟಿಕೋನಗಳಿಂದ ಸಮಾಜವಾದಿ ಆಸ್ತಿ “ಯಾರದ್ದೂ ಅಲ್ಲದ, ಯಾವುದೇ ಉಸ್ತುವಾರಿಯಿಲ್ಲದ ಆಸ್ತಿಯಾಯಿತು ಅನೇಕ ಪ್ರಕರಣಗಳಲ್ಲಿ ಅನಾರ್ಜಿತ [ಸಂಪಾದಿಸದ] ಆದಾಯ ಗಳಿಕೆಗೆ ಉಪಯೋಗವಾಯಿತು.

ಯೋಜನೆಯಲ್ಲಿ ಅನೇಕ ದೋಷಗಳು ಪೇರಿಸಲ್ಪಟ್ಟವು. ಅನೇಕ ಬಾರಿ ಈ ಯೋಜನೆಗಳಿಗೆ ವೈಜ್ಞಾನಿಕ ಆಧಾರ ಸರಿಯಿರಲಿಲ್ಲ ಅನೇಕ ನಿರ್ಣಾಯಕ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ಮಾರ್ಗದರ್ಶನ ಸರಿಯಾಗಿರಲಿಲ್ಲ

ಇಂತಹ ಪರಿಸ್ಥಿತಿಯಲ್ಲಿ ಬೇಜವಾಬ್ದಾರಿ ಬೆಳೆಯಿತು. ಆಡಳಿತಶಾಹಿ ನಿಯಮಾವಳಿಗಳು ನಿರ್ದೇಶನಗಳು, ರಚಿತವಾದುವು - ಕಾರ್ಯಾಚರಣೆಯೆಂಬುದು ಕೇವಲ ಆಜ್ಞೆಗಳ ಆಡಳಿತವಾಗಿ, ಸಾಮರ್ಥ್ಯದ ತೋರಿಕೆಯಾಗಿ, ಬೆಟ್ಟದಷ್ಟು ಕಾಗದಗಳಾಗಿ ಪರಿಣಮಿಸಿತು.

ಹಣ–ವಸ್ತು ಸಂಬಂಧಗಳು, ಹಾಗೂ ಮೌಲ್ಯ ನಿಯಮಗಳನ್ನು ಸಮಾಜವಾದದ ಹೊರಗೆ ಎನ್ನುವಂತೆ ಪರಿಗಣಿಸಲಾಯಿತು. ಇದರಿಂದ ಬೆಲೆ ನಿರ್ಧಾರದಲ್ಲಿ ಹಣ ಬಳಕೆಯಲ್ಲಿ ವ್ಯಕ್ತಿನಿಷ್ಠ ಸಾಹಸವಾದಿ ದೃಷ್ಟಿಕೋನ ಬೆಳೆಯಿತು

ಸಾಮಾಜಿಕ ಆರ್ಥಿಕ ಅಭಿವೃದ್ಧಿಗೆ ಬ್ರೇಕ್ ಹಾಕುವ ಈ ಪ್ರವೃತ್ತಿ, ಸಮಾಜವಾದಿ ಪ್ರಜಾಪ್ರಭುತ್ವದ ಸಂಸ್ಥೆಗಳ ಕೆಲಸದಲ್ಲಿ ನ್ಯೂನತೆಗಳು, ವಾಸ್ತವಿಕತೆಗೆ ಹೊಂದಿಕೆಯಾಗದ ಗತಕಾಲದ ರಾಜಕೀಯ ಸೈದ್ಧಾಂತಿಕ ಪರಿಕಲ್ಪನೆಗಳು, ಸಂಪ್ರದಾಯ ಶರಣ ನಿರ್ವಹಣಾಯಂತ್ರಗಳಲ್ಲಿ ಬೇರುಬಿಟ್ಟಿತು.

ಸಮಾಜವಾದದ ಪ್ರಮುಖ ತತ್ತ್ವವಾದ ಕೆಲಸಕ್ಕೆ ಅನುಗುಣವಾಗಿ ಹಂಚಿಕೆ ಎಂಬ ನೀತಿಯನ್ನು ಉಲ್ಲಂಘಿಸಲಾಯಿತು. ದಕ್ಷ ಕೆಲಸಕ್ಕೆ ನೈತಿಕ ಹಾಗೂ ವಸ್ತು ರೂಪದ ಉತ್ತೇಜನಗಳನ್ನು ಕೊಡಲಿಲ್ಲ ಸಂಬಳ ಸಾರಿಗೆಗಳಲ್ಲಿ “ಒಂದೇ ಮಟ್ಟ”ವನ್ನು ಅನುಸರಿಸಲಾಯಿತು ಇದರ ಪರಿಣಾಮ ಚೆನ್ನಾಗಿ ಕೆಲಸ ಮಾಡುವವರಿಗೆ ಹೊಡೆತ, ಸೋಮಾರಿಗಳಿಗೆ ಜೀವನ ಸುಲಭವಾಯಿತು.

ಜೀವನದಲ್ಲಿ ಸುಖವೇ ಕೊನೆಯ ಗುರಿ ಯಾವುದೇ ಮಾರ್ಗದಲ್ಲಾದರೂ ಸರಿ ಲಾಭವೇ ಗುರಿ ಎಂಬ ಕೆಲ ಯುವಕರೂ ಸೇರಿದ ಜನರ ಸಂಖ್ಯೆ ವಿಸ್ತಾರವಾಗುತ್ತಾ ಹೋಯಿತು. ಇವರ ಸಿನಿಕತನ ಸುತ್ತಲಿನವರ ಮನಸ್ಸುಗಳಿಗೂ ವಿಷ ಪೂಡಿ (ವಿದೇಶಿ ಫ್ರಿಜ್, ಟಿವಿ, ರೇಡಿಯೊಗಳಂತಹ) ವಸ್ತು ಮೋಹದ ಅಲೆಯನ್ನು ಹುಟ್ಟು ಹಾಕಿತು. ಮದ್ಯ ಹಾಗೂ ಮಾದಕ ವಸ್ತುಗಳ [ಡ್ರಗ್ಸ್] ದುರುಪಯೋಗ ಹರಡಿತು. ಅಪರಾಧಗಳು ಹೆಚ್ಚಿದವು.

ಸೈದ್ಧಾಂತಿಕ ಹಾಗೂ ರಾಜಕೀಯ ಶಿಕ್ಷಣದಲ್ಲಿ ಗಂಭೀರ ಕೊರತೆಗಳನ್ನು ಚಳುವಳಿ, ಉತ್ಸವಗಳು, ಡಂಭಾಚರಣೆಗಳಲ್ಲಿ ಮುಚ್ಚಿ ಹಾಕಲಾಯಿತು.

ಕಲೆ ಹಾಗೂ ಸಾಹಿತ್ಯಗಳಲ್ಲಿ

ಸ್ಥಗಿತತೆಯ ಸಿದ್ಧಾಂತ ಹಾಗೂ ಮನೋಭಾವ ಸಂಸ್ಕೃತಿ ಸಾಹಿತ್ಯ ಹಾಗೂ ಕಲೆಗಳಲ್ಲಿ ಕೂಡ ಪರಿಣಾಮ ಬೀರಿತು. ಕಲಾತ್ಮಕ ಸೃಜನಶೀಲ ಕೃತಿಗಳ ಮೌಲ್ಯಮಾಪನದ ಮಾನದಂಡಗಳು ಕುಸಿದುವು. ಇದರ ಪರಿಣಾಮವಾಗಿ ಮುಖಹೀನ ಕಳಪೆ ಬರಹಗಳು, ಮೆದುಳಿಗಾಗಲೀ ಹೃದಯಕ್ಕಾಗಲಿ ಯಾವ ತೃಪ್ತಿಯನ್ನೂ ನೀಡದ ಬರಹಗಳು, ನಿಜ ಜೀವನದ ಸಂಘರ್ಷವನ್ನು ಚಿತ್ರಿಸುವ ಉತ್ತಮ ಬರಹಗಳ ಜೊತೆ ಜೊತೆಗೇ ಕಾಣಿಸಿಕೊಂಡವು.

ಈ ಪರಿಸ್ಥಿತಿಯಲ್ಲಿ ಕಲಾತ್ಮಕ ಕೃತಿಗಳ ಬಗ್ಗೆ ಪಕ್ಷದ ದೃಷ್ಟಿಕೋನ, ಸೃಜ

(5ನೇ ಪುಟ ನೋಡಿ)

ಸೋವಿಯತ್ ಕಮ್ಯುನಿಸ್ಟ್ ಪಕ್ಷದ 27ನೇ ಮಹಾಧಿವೇಶನದ ಸಮಯದಲ್ಲಿ “ಐಕ್ಯರಂಗ” ಪತ್ರಿಕೆ ಹೇಳಿತ್ತು ಸಮಾಜವಾದ ತನ್ನ ನೈಗಂಟಿಕೊಂಡಿದ್ದ ಕೊಳೆಯನ್ನು ಕೊಡವಿಕೊಂಡು ಚೈತನ್ಯಭರಿತವಾಗಿ ಮುನ್ನುಗ್ಗುತ್ತಿದೆ ಎಂದು. ಈ ಮುನ್ನುಗ್ಗುವಿಕೆಗೆ ಇರುವ ಎಲ್ಲಾ ಅಡೆ ತಡೆಗಳನ್ನು ಹತ್ತಿಕ್ಕಿ ಜಡತ್ವದ ಬೇರುಗಳನ್ನು ಹಿಡಿದಲುಗಿಸಿ ಕಿತ್ತು ಮುನ್ನಡೆಯುವದು ಹೇಗೆ ಎಂಬುದನ್ನು ಗೋರ್ಬಚೇವ್ ಇಲ್ಲಿ ತಿಳಿಸುತ್ತಾರೆ. ಎಲ್ಲಾ ಕಮ್ಯುನಿಸ್ಟರೂ ಕಲಿಯಬೇಕಾದ್ದು ಇಲ್ಲಿ ಬಹಳವಾಗಿದೆ.

ಬಂಡವಾಳಶಾಹಿಗಳಿಗೆ ಎದೆ ನಡುಕವನ್ನೂ ಜಗತ್ತಿನೆಲ್ಲಾ ಕಮ್ಯುನಿಸ್ಟ್‌ರಿಗೆ ಹಿಗ್ಗನ್ನೂ ತಂದ ಈ ಘೋಷವನ್ನು ಕೇಳಿ.

ಸ್ವತಂತ್ರ ದೇಶದಲ್ಲಿ, ಮುಕ್ತ ಚಿಂತನೆಗಾಗಿ ಪುನರ್ ಸಂಘಟನೆ

(4ನೇ ಪುಟದಿಂದ)

ನಶೀಲ ಕ್ರಿಯೆಯಲ್ಲಿ ಇಲಾಖೆಗಳ ಅನವಶ್ಯಕ ಮಧ್ಯ ಪ್ರವೇಶಕ್ಕೆ, ವೈಯಕ್ತಿಕ ಇಚ್ಛೆಯ ಆಧಾರದ ಬೇಕು ಬೇಡಗಳಿಗೆ, ಸೈದ್ಧಾಂತಿಕ ಪ್ರಭಾವ ಮತ್ತು ಮಾರ್ಗದರ್ಶನಗಳಿಗೆ ಬದಲಾಗಿ ಆಜ್ಞೆಗಳ ಮೂಲಕ ಆಡಳಿತ ನಡೆಸುವ ಪ್ರವೃತ್ತಿ ಬೆಳೆಯಿತು.

ಸಂಗಾತಿಗಳೇ, ಪಕ್ಷದ ನಾಯಕ ಸಮಿತಿಗಳು, ಸಮಾಜದ ಹಾಗೂ ಕೆಲವು ಕಮ್ಯುನಿಸ್ಟರ ನಡತೆಯಲ್ಲಿನ ಕೆಟ್ಟ ಬೆಳವಣಿಗೆಗಳ ಅಪಾಯವನ್ನು ಸಕಾಲದಲ್ಲಿ ಪತ್ತೆಹಚ್ಚಿ, ಜೀವನದ ಸವಾಲುಗಳನ್ನೆದುರಿಸಲು ಬೇಕಾದ ತೀರ್ಮಾನಗಳನ್ನು ತೆಗೆದುಕೊಳ್ಳುವದರಲ್ಲಿ ವಿಫಲವಾದವು.

ಕಮ್ಯುನಿಸ್ಟರ ಮಧ್ಯೆ ಸಮಾನತೆಯ ತತ್ತ್ವವನ್ನು ಮತ್ತೆ ಮತ್ತೆ ಉಲ್ಲಂಘಿಸಲಾಯಿತು. ಮೇಲ್ಮಟ್ಟದ ಕಾರ್ಯಕಾರೀ ಸ್ಥಾನಗಳಲ್ಲಿದ್ದ ಪಕ್ಷದ ಅನೇಕ ಸದಸ್ಯರು. ಪಕ್ಷದ ನಿಯಂತ್ರಣ ಹಾಗೂ ಟೀಕೆಯ ಹೊರಗೇ ಉಳಿದರು ಇದು ಪಕ್ಷದ ನೈತಿಕತೆ ಹಾಗೂ ಕೆಲಸದಲ್ಲಿ ಸೋಲುಂಟಾಗಲು ಕಾರಣವಾಯಿತು.

ಪಕ್ಷಕ್ಕೆ ಸೇರಿರುವ ಬಹಳಷ್ಟು ಸದಸ್ಯರು ಕಾರ್ಮಿಕವರ್ಗದ, ಸಾಮೂಹಿಕಕ್ಷೇತ್ರಗಳ ರೈತರ, ಬುದ್ಧಿಜೀವಿಗಳ ಅತ್ಯುಚ್ಚ ಪ್ರತಿನಿಧಿಗಳು. ಆದರೆ ಈ ವರ್ಷಗಳಲ್ಲಿ ಅಪ್ರಾಮಾಣಿಕ, ದುರಾಸೆಯಂತ ಜನ ಪಕ್ಷದ ಸದಸ್ಯತ್ವದಿಂದ ಲಾಭ ಪಡೆದುಕೊಳ್ಳುವಂತಹ ಜನಕ್ಕೆ ಪಕ್ಷವನ್ನು ಸೇರಲು ಬಲವಾದ ಅಡ್ಡಿಗಳೇನೂ ಇರಲಿಲ್ಲವೆಂಬುದನ್ನು ನಾವು ಒಪ್ಪಿಕೊಳ್ಳಬೇಕು. ಪಕ್ಷದ ಸದಸ್ಯ ಸಂಖ್ಯೆಯಲ್ಲಿ ಅವರ ಗುಣಮಟ್ಟ ಮುಖ್ಯವಾದದ್ದು ಎಂಬ ನಿಯಮವನ್ನು ಸ್ವಲ್ಪಮಟ್ಟಿಗೆ ಮುರಿದಿದ್ದೇವೆ. ಇದರಿಂದ ಪಕ್ಷ ಸಮರಶೀಲ ಮನೋಭಾವಕ್ಕೆ ಹಾನಿಯಾಗಿದೆ.

(ಪುನರ್ಸಂಘಟನೆ ಏಕೆ ಅವಶ್ಯಕವಾಯಿತು ಎಂಬುದನ್ನು ಮೇಲೆ ವಿವರಿಸಿದ ಕಾಂ. ಗೋರ್ಬಚೆವ್‌ರವರು ಪುನರ್ಸಂಘಟನೆ ಎಂದರೇನು ? ಅದನ್ನು ಹೇಗೆ ಮಾಡಬೇಕು ಎಂಬುದನ್ನು ವಿವರಿಸುತ್ತಾರೆ)

ಪುನರ್ ಸಂಘಟನೆ ಎಂದರೆ

ಪುನರ್ಸಂಘಟನೆ ಎಂದರೆ ಸ್ಥಗಿತೆಯ ಪ್ರತಿಕ್ರಿಯೆಗಳನ್ನು ಹಿಮ್ಮೆಟ್ಟಿಸುವುದು, ಹಿಂದಕ್ಕೆಳೆಯುವ ತಂತ್ರಗಳನ್ನು ನಾಶ ಮಾಡುವುದು, ಸೋವಿಯತ್ ಸಮಾಜದ ಆರ್ಥಿಕ ಸಾಮಾಜಿಕ ಬೆಳವಣಿಗೆಯನ್ನು ತೀವ್ರಗೊಳಿಸಲು ಸಮರ್ಥವಾದ, ನಂಬಲರ್ಹವಾದ ಕಾರ್ಯತಂತ್ರ ರೂಪಿಸುವುದು........,

ಪುನರ್ಸಂಘಟನೆ ಎಂದರೆ ಜನರ ಕೆಲಸಗಳ ಮೇಲೆ ಅವಲಂಬನೆ, ಪ್ರಜಾಪ್ರಭುತ್ವ ಮತ್ತು ಸಮಾಜವಾದ ಸ್ವಯಮಾಡಳಿತವನ್ನು ಎಲ್ಲಾ ಕ್ಷೇತ್ರಗಳಿಗೂ ವಿಸ್ತರಿಸುವುದು,ಸಾರ್ವಜನಿಕ ಜೀವನದ ಎಲ್ಲಾ ಅಂಗಗಳಲ್ಲಿ ಮುಕ್ತ ವಾತಾವರಣ,ಟೀಕೆ ಮತ್ತುಸ್ವಯಂಟೀಕೆ.

ಪುನರ್ಸಂಘಟನೆ ಎಂದರೆ ದೇಶದ ಆರ್ಥಿಕತೆಯ ವ್ಯವಸ್ಥಾಪನೆಯಲ್ಲಿ ಲೆನಿನ್‌ವಾದಿ ಪ್ರಜಾತಾಂತ್ರಿಕ ಕೇಂದ್ರವಾದದ ನಿಯಮಗಳ ಮರು ಸ್ಥಾಪನೆ ಮತ್ತು ವಿಸ್ತರಣೆ........

ಪುನರ್ಸಂಘಟನೆ ಎಂದರೆ ಸೋವಿಯತ್ ಸಮಾಜದಲ್ಲಿ ಸಮಾಜವಾದಿ ನೈತಿಕತೆಗೆ ವಿಪರೀತವಾದ ಎಲ್ಲಾ ವರ್ತನೆಗಳನ್ನು ಕಿತ್ತೊಗೆಯುವುದು........

ಈಗಾಗಲೇ ಪುನರ್ಸಂಘಟನೆಯ ಈ ಕಾರ್ಯ ಆರಂಭವಾಗಿದ್ದು, ಪರಿಣಾಮ ಕಾಣಲಾರಂಭಿಸಿದೆ. ಕೆಲಸದ ಪ್ರಮಾಣ ಮತ್ತು ಗುಣಮಟ್ಟಕ್ಕೆ ಸರಿಯಾದ ವೇತನ,ಕೊಡುವ ನೀತಿ ಹಲವು ಕ್ಷೇತ್ರಗಳಲ್ಲಿ ಆಗಲೇ ಕಾರ್ಯಗತವಾಗಲಾರಂಭಿಸಿದೆ. ಕೈಗಾರಿಕೆಯ ಕ್ಷೇತ್ರಗಳಲ್ಲಿ ಮತ್ತು ಮುಖ್ಯವಾಗಿ ಸಮಸ್ಯಾತ್ಮಕವಾಗಿದ್ದ ಕೃಷಿ ಕ್ಷೇತ್ರಗಳಲ್ಲಿ ಆಗಲೇ ಸುಧಾರಣೆ ಕಾಣ ಬಂದಿದೆ. ಆದರೆ ಇನ್ನೂ ಹಲವು ಕ್ಷೇತ್ರಗಳಲ್ಲಿ ಜಡತ್ವ ತಾನೇತಾನಾಗಿದೆ. "ಆರಂಭವಾಗಿರುವ ಈ ಬದಲಾವಣೆಗಳು ಕೊನೆಯತನಕ ಸಾಗುತ್ತವೆ, ಹಿಂದಿನ ತಪ್ಪುಗಳ ಪುನರಾವರ್ತನೆ ಆಗುವುದಿಲ್ಲ.... ಎಂಬುವುದಕ್ಕೆನಮ್ಮಹತ್ತಿರ ಸಮರ್ಪಕ ಉತ್ತರವಿದೆಯೆ ? ಎಂದು ಪ್ರಶ್ನಿಸಿ ಪಾಲಿಟ್ ಬ್ಯೂರೋದ ಉತ್ತರ ಇದಕ್ಕೆ ಹೌದು ಎಂದು" ಎಂದು ಸಾರಿದ ಕಾಮ್ರೇಡ್ ಗೋರ್ಬಚೆವ್ ಸಮಾಜವಾದಿ ಪ್ರಜಾಸತ್ತೆಯನ್ನು ಗಟ್ಟಿಗೊಳಿಸುವ ಮತ್ತು ಪಕ್ಷದ ಕಾರ್ಯಕರ್ತರ ಬಗ್ಗೆ ಹೊಸ ನೀತಿಗಳ ಈ ಉತ್ತರ ಎಂದರು.

ಕೈಗಾರಿಕೆಗಳಲ್ಲಿ ಕೃಷಿ ಕ್ಷೇತ್ರದಲ್ಲಿ ಚುನಾವಣೆಗಳು

'ಪುನರ್ಸಂಘಟನೆ ಪ್ರಜಾತಂತ್ರದಿಂದ ಮತ್ತು ಪ್ರಜಾತಂತ್ರದ ಮೂಲಕ ಮಾತ್ರ ಸಾಧ್ಯ....ಆದ್ದರಿಂದ ಸೋವಿಯೆತ್ ಸಮಾಜದ ಸಂಪೂರ್ಣ ಪ್ರಜಾ ತಾಂತ್ರೀಕರಣ ಪಕ್ಷದ ತುರ್ತಿನ ಕೆಲಸ. ಜನರ ಸಮಾಜವಾದಿ ಸ್ವಯಂ ಮಾಡಳಿತ ಉತ್ತೇಜನ 27ನೇ ಅಧಿವೇಶನದ ನಿಯಮಗಳ ತಿರುಳು....' ಎಂದು ಹೇಳುತ್ತಾ ಕಾ. ಗೋರ್ಬಾಚೇವ್ ಅವರು ಈ ಬಗ್ಗೆ ಕೆಲವು ಸೂತ್ರಗಳನ್ನು ಕೇಂದ್ರ ಸಮಿತಿಯ ಮುಂದಿಟ್ಟರು.

ಇದರಲ್ಲಿ ಮುಖ್ಯವಾದುದು–ಸರಕಾರಿ ಸಂಘಟನೆಗಳ ಬಗೆಗಿನ ಹೊಸ ಕಾನೂನು ರಚಿಸಿ ಉತ್ಪಾದನೆಯಲ್ಲಿ ದುಡಿಯುವ ಜನರು ಸ್ವಯಂ ನಿರ್ವಹಣೆಯು ಸುಸಂಗತವಾಗಿ ಜಾರಿಗೆ ತರುವಂತೆ ಉತ್ತೇಜನ ನೀಡುವುದು ಈ ಕಾನೂನಿನ ಉದ್ದೇಶ. ಕಾರ್ಖಾನೆ ವಿಷಯಗಳ ಮೇಲೆ ನಿರ್ಣಯ ತೆಗೆದುಕೊಳ್ಳುವ ಹಕ್ಕು ಕೊಡುವುದು ಈ ಕಾನೂನಿನ ಒಂದು ಅಂಶ.

ಇದೇ ರೀತಿಯ ಕೃಷಿ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಸಹ ಕಾನೂನುಗಳನ್ನು ಯೋಜಿಸಲಾಗಿದೆ. ಕೃಷಿ ಕ್ಷೇತ್ರದಲ್ಲಿ ಸಹಕಾರಿ ಚಳುವಳಿಯ ಸಾಧ್ಯತೆಗಳನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಲು ಕ್ರಮಗಳನ್ನೂ ಕೇಂದ್ರ ಸಮಿತಿಯ ಮುಂದಿಡಲಾಯಿತು.

ಕಾರ್ಖಾನೆಗಳು ಹಾಗು ಇತರ ಉತ್ಪಾದಕ ಚಟುವಟಿಕೆಗಳುಳ್ಳ ಸಂಘಟನೆಗಳ ಮುಖ್ಯಸ್ಥರನ್ನು ಚುನಾಯಿಸುವ ಪದ್ಧತಿ ತರಬೇಕೆಂಬುದು ಇಂತಹ ಇನ್ನೊಂದು ಸೂತ್ರ. ಕೈಗಾರಿಕೆ, ಕೃಷಿ ಕ್ಷೇತ್ರಗಳಂತಹ ಆರ್ಥಿಕ ಸಂಘಟನೆಯನ್ನು ಅದರ ಸಫಲತೆ-ವಿಫಲತೆಗೆ ಪೂರ್ಣ ಜವಾಬ್ದಾರಿ ಮಾಡುವ ಹೊಸ ನಿರ್ವಹಣಾ ನೀತಿಗೆ ಈ ಸೂತ್ರ ಮುಖ್ಯ. ಇದು ಪ್ರಜಾತಾಂತ್ರಿಕ ಕೇಂದ್ರ ವಾದವನ್ನು ಕಾರ್ಮಿಕರ ಸ್ವಯಂ ನಿರ್ವಹಣೆಯಲ್ಲಿ ಅಳವಡಿಸುವಲ್ಲಿ ಮುಖ್ಯ ಕ್ರಮವೆನ್ನಬಹುದು.

ಸೋವಿಯತ್ ಚುನಾವಣಾ ಪದ್ಧತಿಯಲ್ಲಿ ಸುಧಾರಣೆಗಳನ್ನು ತರುವ ಸೂಚನೆಗಳನ್ನೂ ಮುಂದಿಡಲಾಯಿತು. ಚುನಾವಣಾ ಪ್ರಕ್ರಿಯೆಯಲ್ಲಿ ಜನರು ಅರ್ಥಪೂರ್ಣವಾಗಿ ಭಾಗವಹಿಸುವಂತೆ ಮತ್ತು ಕೇವಲ ಔಪಚಾರಿಕವಾಗಿರುವ ಚುನಾವಣೆಗಳನ್ನು ಉತ್ತಮಪಡಿಸಲು ಈಗಾಗಲೇ ಸಾರ್ವಜನಿಕ ಚರ್ಚೆ ನಡೆದಿದೆ. ಇದರ ಮುಖ್ಯ ಅಂಶಗಳನ್ನು ಕಾನೂನಿನಲ್ಲಿ ಅಳವಡಿಸಿ ಪುನಃ ಇದನ್ನು ದೇಶದ ಮುಂದೆ ಚರ್ಚೆಗಿಡಬೇಕು ಎಂದು ಕೇಂದ್ರ ಸಮಿತಿಗೆ ಸೂಚಿಸಿದರು.

ಹೌದು ಬೊಲ್ಶೆವಿಕರೂ ಎನ್ನನ್ನಾದರೂ ಸಾಧಿಸಬಲ್ಲರು

ನಮ್ಮ ದೇಶವನ್ನು ಒಂದು ಅತ್ಯಂತ ಅಭಿವೃದ್ಧಿ ಹೊಂದಿದ ಪ್ರಭುತ್ವದ ಮಾದರಿಯನ್ನಾಗಿ ಮಾಡಬೇಕೆಂಬುದು, ಅತ್ಯಂತ ಮುಂದುವರಿದ ಆರ್ಥಿಕತೆಯನ್ನುಳ್ಳ,ಅತ್ಯಂತ ವಿಶಾಲ ಪ್ರಜಾಪ್ರಭುತ್ವವುಳ್ಳ, ಅತ್ಯಂತ ಮಾನವೀಯ ಹಾಗೂ ಉಚ್ಚ ನೈತಿಕತೆಯುಳ್ಳ ದೇಶವನ್ನಾಗಿಸಬೇಕೆಂಬುದು ನಮ್ಮ ಬಯಕೆ. ಎಲ್ಲಿ ದುಡಿಯುವ ವ್ಯಕ್ತಿ ತಾನು ಯಜಮಾನನೆಂಬ ಭಾವನೆ ಹೊಂದಿರ ಬಲ್ಲನೋ, ಸಕಲ ಭೌತಿಕ ಮತ್ತು ಆಧ್ಯಾತ್ಮಿಕ ಸೌಲಭ್ಯಗಳನ್ನು ಅನುಭವಿಸ ಬಲ್ಲನೋ,ಎಲ್ಲಿ ಅವನ ಮಕ್ಕಳ ಭವಿಷ್ಯ ಸುಭದ್ರವಾಗಿರುವುದೋ, ಎಲ್ಲಿ ಒಂದು ಪರಿಪೂರ್ಣ ಮತ್ತು ಆಸಕ್ತಿಭರಿತ ಜೀವನಕ್ಕೆ ಬೇಕಾದ ಎಲ್ಲವೂ ಆತನಿಗೆ ದೊರೆಯುತ್ತದೋ,ಯಾವುದನ್ನು ನೋಡಿ ಸಂದೇಹವಾದಿಗಳು ಕೂಡಾ 'ಹೌದು,ಬೋಲ್ಶೆವಿಕರು ಏನನ್ನು ಬೇಕಾದರೂ ಸಾಧಿಸಬಲ್ಲರು; ಹೌದು, ಸತ್ಯ ಅವರ ಕಡೆಗಿದೆ; ನಿಜ, ಸಮಾಜವಾದ ಮಾನವನ ಸೇವೆಗಾಗಿರುವ, ಅವನ ಸೌಲಭ್ಯಕ್ಕಾಗಿ ದುಡಿಯುವ, ಆತನ ಸಾಮಾಜಿಕ ಮತ್ತು ಆರ್ಥಿಕ ಹಿತಾಸಕ್ತಿಗಳಿಗಿರುವ ಹಾಗೂ ಆತನ ಆಧ್ಯಾತ್ಮಿಕ ಔನತ್ಯಕ್ಕಾಗಿರುವ ವ್ಯವಸ್ಥೆ' ಎಂದು ಹೇಳಲೇ ಬೇಕಾಗುತ್ತದೋ ಅಂತಹ ಸಮಾಜವನ್ನಾಗಿ ಮಾಡಬೇಕೆಂಬುದು ನಮ್ಮ ಬಯಕೆ.

ಪಕ್ಷದ ಒಳಗಿನ ಪ್ರಜಾಸತ್ತೆ

ಇದೇ ರೀತಿ ಪಕ್ಷದ ಒಳಗಿನ ಪ್ರಜಾಸತ್ತೆಯನ್ನು ಬಲಗೊಳಿಸಲು ಪಕ್ಷದ ನಿಯಮಗಳನ್ನು ತಿದ್ದುಪಡಿ ಮಾಡುವ ಬಗ್ಗೆ ಸೂಚನೆಗಳನ್ನು ಮುಂಡಿಸಲಾಯಿತು. ಪಾರ್ಟಿಯ ಸಂಘಟನೆಯ ಪ್ರತಿಯೊಂದು ಕಾರ್ಯಕಾರಿ ಸಮಿತಿ ಚುನಾಯಿತವಾಗಬೇಕು. ಜಿಲ್ಲೆ, ಪ್ರದೇಶ, ನಗರ, ರಾಜ್ಯ ಮತ್ತು ಕೇಂದ್ರ ಸಮಿತಿಯ ಸದಸ್ಯರನ್ನು ಗುಪ್ತ ಮತದಾನದಿಂದಆಚರಿಸಬೇಕು ಇತರ ಸಾಮೂಹಿಕ ಸಂಘಟನೆಗಳಲ್ಲೂ ಮತದಾನದ ಪದ್ಧತಿ ಜಾರಿಗೆ ಬರಬೇಕು.

ಎಲ್ಲಾ ಚುನಾಯಿತ ಘಟಕಗಳ ಮೇಲೆ ಜನರಿಗೆ ನಿಜವಾದ ಮತ್ತು ನಿರ್ಣಾಯಕ ನಿಯಂತ್ರಣ ಕೊಡುವುದೂ ಈ ಘಟಕಗಳನ್ನು ಜವಾಬ್ದಾರಿಯುತ ಮಾಡುವಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ಸಾರ್ವಜನಿಕ ಜೀವನದ ಎಲ್ಲಾ ರಂಗಗಳಲ್ಲಿ ಟೀಕೆ ಮತ್ತು ಸ್ವಯಂ ಟೀಕೆಯ ಆಯುಧಗಳನ್ನು ಬಳಸಲು ಹಾದಿ ಮಾಡಿಕೊಡುವುದು ಈಗಾಗಲೇ ಕಾರ್ಯಗತವಾಗಿದೆ. ಈ ರೀತಿ ಮಾತ್ರವೇ ಇನ್ನೂ ಇರುವ ಟೀಕೆಯನ್ನು ದಮನ ಮಾಡುವ ಅಧಿಕಾರಿಶಾಹಿ ಪ್ರವೃತ್ತಿಯನ್ನು ಎಲ್ಲಾ ಹಂತಗಳಿಂದ ಹೊಡೆದು ಹಾಕಲು ಸಾಧ್ಯ. ಸಾಮೂಹಿಕ ಮಾಧ್ಯಮಗಳ ವಿಚಾರದಲ್ಲಿ ಸೋವಿಯತ್ ಸಮಾಜದ ಯಾವುದೇ ಅಂಶ ಟೀಕೆಗೆ ಹೊರತಾಗಿಲ್ಲ ಎಂದು ಪ್ರತಿಪಾದಿಸಲಾಯಿತು.

ಪಕ್ಷದ ಸದಸ್ಯರಲ್ಲದವರೂ ಕೂಡ

ಉನ್ನತ ಸ್ಥಾನಗಳಿಗೆ ಪಕ್ಷದ ಸದಸ್ಯರಲ್ಲದ ಯೋಗ್ಯ, ಸಮರ್ಥ ವ್ಯಕ್ತಿಗಳನ್ನು ನೇಮಿಸುವುದು ಸಾರ್ವಜನಿಕ ಜೀವನದ ಪ್ರಜಾತಾಂತ್ರೀಕರಣಮುಖ್ಯ ಮಜಲು. ಪಕ್ಷ ಮತ್ತು ಜನರ ಸಂಬಂಧಗಳನ್ನು ಸರಿಯಾದ ರೀತಿಯಲ್ಲಿಡುವುದಕ್ಕೂ ಇದು ಮುಖ್ಯ

ಸೋವಿಯತ್ ಸಮಾಜ ದೊಡ್ಡ ಸವಾಲುಗಳನ್ನು ಎದುರಿಸಬೇಕಾಗಿಲ್ಲ. ಯುವಜನರ ಸಂಘಟನೆಮಹತ್ವದ ಪಾತ್ರ ವಹಿಸಿದೆ. ಮಹಿಳೆಯರನ್ನುಉನ್ನತ ಮತ್ತು ಮುಖ್ಯಸ್ಥಾನಗಳಿಗೆ ನೇಮಿಸುವುದು ಇದೇ ರೀತಿಯ ಮುಖ್ಯ ಕ್ರಮ.

ದೇಸೀಯ ಜನಾಂಗಗಳು ಹಾಗೂ ಸಮಾಜವಾದ

ಈಗ ಪ್ರಜಾಸತ್ತೆ ಹಾಗೂ ಸ್ವಯಮಾಡಳಿತ ವಿಸ್ತರಿಸುವಾಗ ಎಲ್ಲಾ ದೇಸೀಯ ಜನಾಂಗಗಳ (ಭಾರತದಲ್ಲಿ ಕನ್ನಡ,ಹಿಂದಿ,ಮರಾಠಿ ಇತ್ಯಾದಿ ವಿವಿಧ ಭಾಷೆಗಳನ್ನುಮಾತನಾಡುವ ಜನಾಂಗಗಳ) ಹಾಗೂ ಗಿರಿಜನರ ದೇಸೀಯ ಪ್ರಜ್ಞೆ ಎಚ್ಚೆತ್ತುಕೊಳ್ಳುತ್ತದೆ. ಅಂತರಾಷ್ಟ್ರೀಯತೆಯ ಪ್ರಜ್ಞೆಯೂ ಆಳವಾಗುತ್ತದೆ.

ಈ ಸಂದರ್ಭದಲ್ಲಿ ಅನೇಕ ನಕಾರಾತ್ಮಕ ಬೆಳವಣಿಗೆಗಳು ಕೂಡಾ ಈ ದೇಸೀ ಜನಾಂಗಗಳ ನಡುವಿನ ಸಂಬಂಧದಲ್ಲಿ ಮೂಡಿವೆ. ಸಂಕುಚಿತ ಮನೋಭಾವ, ಜನಾಂಗಗಳ ಪ್ರತ್ಯೇಕವಾದ ಹಾಗೂ ಜನಾಂಗಗಳ ಅಹಂಭಾವಗಳು ಕಜಾಕಾಸ್ತಾನದ ಅಲ್ಮಾ ಆಟದಲ್ಲಿ ನಡೆದ ಘಟನೆಗಳಂತಹವು ಸಂಭವಿಸಿವೆ.

ಇದು ಕಜಾಕಾಸ್ತಾನ ಕಮ್ಯುನಿಸ್ಟರನ್ನಷ್ಟೇ ಅಲ್ಲ, ಪಕ್ಷದ ಎಲ್ಲಾ ಸಂಘಟನೆಗಳನ್ನು ಎಚ್ಚರಿಸಬೇಕು.

ಕಾರ್ಯಕರ್ತರ ಬಗ್ಗೆ ನೀತಿ

ಈಗ ಅತ್ಯವಶ್ಯವಾಗಿರುವುದೆಂದರೆ ಈ ಪುನರ್ಸಂಘಟನೆಯ, ಸಾಮಾಜಿಕ ಆರ್ಥಿಕ ಅಭಿವೃದ್ಧಿಯ ಕರ್ತವ್ಯ ನಿರ್ವಹಣೆಯಲ್ಲಿ ಹೆಗಲೆಣೆಯಾಗುವ ಕಾರ್ಯಕರ್ತರ ನೀತಿ ಅನೇಕ ತತ್ವಬದ್ಧ, ಪರಿಣಾಮಕಾರಿಯಾದ ಕಾರ್ಯಕರ್ತರ ನೀತಿಯನ್ನು ಅನುಸರಿಸಿ ಪಕ್ಷದ ನಾಯಕತ್ವದ ಸರಪಳಿಯ ಎಲ್ಲಾ ಗೊಣಸುಗಳಲ್ಲಿ(ಲಿಂಕ್ಸ್) ಅತ್ಯುತ್ತಮ ಸಾಮರ್ಥವನ್ನೇ ಖಾತರಿಗೊಳಿಸಿದ್ದರೆ ಹಿಂದಿನ ದಿನಗಳ ಅನೇಕ ತಪ್ಪುಗಳನ್ನು ತಪ್ಪಿಸಬಹುದಿತ್ತು. ಈ ತಪ್ಪುಗಳನ್ನು ಒಪ್ಪಿಕೊಳ್ಳುವುದಕ್ಕೆ ಮಾತ್ರ ನೀತಿಗೊಳಿಸಕೊಳ್ಳದಿರೋಣ. ಈ ತಪ್ಪುಗಳಳಿಂದ ಪಾಠ ಕಲಿಯೋಣ, ಈ ತಪ್ಪುಗಳು ಯಾವುವು?

ಮೊಟ್ಟಮೊದಲನೆಯದಾಗಿ ಪಕ್ಷದ ಕೇಂದ್ರ ಸಮಿತಿಯೊಳಗಿನ ಕಾರ್ಯಕರ್ತರ ಪ್ರಶ್ನೆ. ಎಪ್ರಿಲ್85ರ ಪ್ಲೀನಂ ನಂತರ ಕೇಂದ್ರಸಮಿತಿ ಕಛೇರಿಯ ಕಾರ್ಯದರ್ಶಿ ಮಂಡಳಿ ಹಾಗೂ ವಿವಿಧ ಇಲಾಖೆಗಳ ಮುಖ್ಯಸ್ಥರು ಹಾಗೂ ಮಂತ್ರಿಮಂಡಲದಲ್ಲಿ ಬಹಳಷ್ಟು ಜನರನ್ನು ಬದಲಾಯಿಸಲಾಗಿದೆ. ದೀರ್ಘಕಾಲ ಈ ಬದಲಾವಣೆಗಳನ್ನು ಮಾಡದಿದುದರಿಂದ ಈಗ ಈ ಬದಲಾವಣೆಗಳನ್ನು ಒಮ್ಮೆಗೇ ಮಾಡಬೇಕಾಯಿತು. (ಸಿ.ಪಿ.ಎಸ್.ಯು.)ನ ಕೇಂದ್ರಸಮಿತಿ ಲೆನಿನ್ನರ ವಿಚಾರ,ತತ್ವಹಾಗೂ ವಿಧಾನಗಳನ್ನು ಜಾರಿಗೆ ತರುವ ಮಾದರಿಯಾಗಬೇಕು.

ಇದರಲ್ಲಿ ಕೇಂದ್ರ ಸಮಿತಿ ತಿದ್ದಿಕೊಳ್ಳಬೇಕಾದ್ದು ಬಹಳಷ್ಟಿದೆ. ಅನೇಕ ವರ್ಷಗಳ ಕಾಲ ಪಕ್ಷಕ್ಕೆ ಹಾಗೂ ಜನರಿಗೆ ಸಂಬಂಧಿಸಿದ ನಿರ್ಣಾಯಕ ಅಂಶಗಳು ಪ್ಲೀನಂ ಸಭೆಗಳ ಅಜೆಂಡಾದಲ್ಲಿ ಸೇರಲಿಲ್ಲ. ಕೇಂದ್ರಸಮಿತಿ ಸಭೆಗಳು ಅತ್ಯಂತ ಕಡಿಮೆ ಅವಧಿಯ ಔಪಚಾರಿಕ ಸಭೆಗಳಾಗಿದ್ದುವು. ಅನೇಕ ಕೇಂದ್ರ ಸಮಿತಿ ಸದಸ್ಯರಿಗೆ ತಮ್ಮ ಇಷ್ಟೀ ಕೇಂದ್ರ

(6ನೇ ಪುಟ ನೋಡಿ)

ಎ. ಕೆ. ಜಿ. ದಿನಾಚರಣೆ

ಬೆಂಗಳೂರು

ಎ. ಕೆ. ಜಿ. ಯವರ ಮರಣದ ದಶ ಮಾನೋತ್ಸವದ ಅಂಗವಾಗಿ ಮಾರ್ಚ್ 22ರಂದು ಗೋಖಲೆ ಇನ್‌ಸ್ಟಿಟ್ಯೂಟ್‌ನಲ್ಲಿ ನಡೆದ ಸಮಾರಂಭದಲ್ಲಿ ಸಿ.ಪಿ.ಐ. (ಎಂ) ಸೆಕ್ರೆಟಾರಿಯೆಟ್ ಸದಸ್ಯರಾದ ವಿ. ಜೆ. ಕೆ. ನಾಯರ್ ಅವರು 'ರಾಷ್ಟ್ರೀಯ ಭಾವೈಕ್ಯತೆ ಮತ್ತು ಪ್ರಜಾಪ್ರಭುತ್ವ' ಎಂಬ ವಿಷಯದ ಕುರಿತು ವಿಸ್ತೃತ ಭಾಷಣ ಮಾಡಿದರು. ಸಿ. ಐ. ಟಿ. ಯು. ಅಧ್ಯಕ್ಷರಾದ ಎಸ್. ಸೂರ್ಯನಾರಾಯಣ ರಾವ್ ಅವರು ರಾಷ್ಟ್ರೀಯ ಸಮಗ್ರತೆ ಮತ್ತು ಎ. ಕೆ. ಜಿ. ಯವರ ಜೀವನದ ಕುರಿತು ವಿವರಿಸಿದರು. ಅಧ್ಯಕ್ಷತೆ ವಹಿಸಿದ್ದ ಎನ್. ಕೆ. ಉಪಾಧ್ಯಾಯರು, ಎ. ಕೆ. ಜಿ. ಯವರ ಜೀವನದ ಹಲವು ಮಹತ್ವದ ಘಟನೆಗಳನ್ನು ವಿವರಿಸಿದರು. ಪ್ರಾರಂಭದಲ್ಲಿ ಎ.ಕೆ.ಜಿ. ವಾಚನಾಲಯದ ಅಧ್ಯಕ್ಷರಾದ ಎಸ್. ಆರ್. ಆರಾಧ್ಯ ಅವರು ಸ್ವಾಗತಿಸಿದರು. ಮುಖ್ಯ ವಿಷಯದ ಮೇಲೆ ಹಲವಾರು ಸಂಗಾತಿಗಳು ತಂತಮ್ಮ ವಿಚಾರ ಮಂಡಿಸಿದರು.

ಹರಿಹರ : 22-3-87ರಂದು ಇಲ್ಲಿನ ಸಿ.ಪಿ.ಐ.(ಎಂ) ಸದಸ್ಯರು ಮತ್ತು ಹಿತೈಷಿಗಳು ಸಭೆ ಸೇರಿ ಎ.ಕೆ.ಜಿ.ಯವರ ಸ್ಫೂರ್ತಿದಾಯಕ ಬದುಕನ್ನು ಸ್ಮರಿಸಿದರು. ಆರಂಭದಲ್ಲಿ ಎ.ಕೆ.ಜಿ.ಯವರು ಲೋಕ ಸಭೆಯಲ್ಲಿ ಮಾಡಿದ ಕೊನೆಯ ಭಾಷಣವನ್ನು ಓದಲಾಯಿತು. ಅಧ್ಯಕ್ಷತೆ ವಹಿಸಿದ್ದ ಕಾ|| ನಿತ್ಯಾನಂದ ಸ್ವಾಮಿ ಸಾಮ್ರಾಜ್ಯಶಾಹಿ ಮತ್ತು ಭೂಮಾಲಕ ಬಂಡವಾಳಶಾಹಿ ಪ್ರಭುತ್ವದ ವಿರುದ್ಧವಾದ ನಮ್ಮ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಎ.ಕೆ.ಜಿ. ಜೀವನ ಚರಿತ್ರೆಯಿಂದ ಪ್ರೇರಣೆ ಪಡೆಯ ಬೇಕಾಗಿದೆಯೆಂದರು. ○

ಕಾರ್ಯಕರ್ತರ ಬಗ್ಗೆ ನೀತಿ

(5ನೇ ಪುಟದಿಂದ)

ಸಮಿತಿ ಸದಸ್ಯತ್ವದ ಅವಧಿಯಲ್ಲಿ ಒಮ್ಮೆಯಾದರೂ ಚರ್ಚೆಗಳಲ್ಲಿ ಭಾಗವಹಿಸಲು ಅವಕಾಶಗಳಿರಲಿಲ್ಲ. ಕೇಂದ್ರ ಸಮಿತಿ ಸಭೆಗಳ ಇಂತಹ ವಾತಾವರಣ ಪಕ್ಷದ ಸ್ಥಳೀಯ ಘಟಕ ಹಾಗೂ ಸಂಘಟನೆಗಳ ಮೇಲೆ ಕೂಡಾ ಪ್ರಭಾವ ಬೀರಿತು.

ಎರಡನೆಯದಾಗಿ, ಕಾರ್ಯಕರ್ತರಿಗೆ ರಾಜಕೀಯ, ತಾತ್ವಿಕ ತರಬೇತಿ, ಸೈದ್ಧಾಂತಿಕ ಹಾಗೂ ನೈತಿಕ ಧೃಢತೆ ಮೂಡಿಸುವುದು ಇವುಗಳಿಗೆ ಎಂದೂ ಪ್ರಾಶಸ್ತ್ಯ ಕಡಿಮೆಯಾಗಬಾರದು.

ವಿಷಾದನೀಯವಾದ ವಿಷಯವೆಂದರೆ ಪಕ್ಷದ ಸಮಿತಿಗಳು ಹಾಗೂ ಕಾರ್ಯದರ್ಶಿಗಳು ತಮ್ಮ ತಪ್ಪುಗಳನ್ನು ಕೆಲವು ಬಾರಿ ತಮ್ಮ ಸೋಲುಗಳನ್ನು ಮುಚ್ಚಿಕೊಳ್ಳಲು ಕಾರ್ಯಕರ್ತರ ಬಗ್ಗೆ ಬಹಳ ಶಿಸ್ತಿನಿಂದ ಕೆಲಸ ತೆಗೆಯುವವರಂತೆ ವರ್ತಿಸುವುದು ತೋರಿಕೆಗಾಗಿ ಮಾತ್ರವೇ ತತ್ವಗಳಿಗೆ ಅಂಟಿಕೊಂಡವರಂತೆ ಕಾಣಿಸುವುದು, ವಿಷಯದ ತಿರುಳಿಗಾಗಲಿ, ಸಂಬಂಧಿಸಿದ ಜನರ ಬಗ್ಗೆಯಾಗಲಿ ಕಾಳಜಿ ಇಲ್ಲದಿರುವುದು.

ಕೈಕೆಳಗಿನ ಕಾರ್ಯಕರ್ತರ ಸ್ವತಂತ್ರ ಯೋಜನೆ ಹಾಗೂ ಕೆಲಸದ ಬಗ್ಗೆ ತಾತ್ಸಾರ ತೋರುವುದು.

ಈ ಎಲ್ಲಾ ಸಮಸ್ಯೆಗಳು ಬಹಳಕಾಲ ಗಮನವಿಲ್ಲದೆ ಬಗೆಹರಿಸಲ್ಪಡದೆ ಏಕೆ ಪೇರಿಕೊಂಡವು ಇದು ಹೇಗೆ ಸಾಧ್ಯವಾಯಿತು? ಇದು ಪ್ರಶ್ನೆ.

ಪಾಲಿಟ್‌ಬ್ಯೂರೋದ [ಸಿ.ಪಿ.ಎಸ್.ಯು.ವಿನ] ಅಭಿಪ್ರಾಯವೆಂದರೆ ಇದೆಲ್ಲದಕ್ಕೂ ಮುಖ್ಯಕಾರಣ ಕಾರ್ಯಕರ್ತರ ಬಗ್ಗೆ ಪ್ರಜಾಸತ್ತಾತ್ಮಕ ತತ್ವಗಳನ್ನು ಅಳವಡಿಸುವುದರಲ್ಲಿ ಸಡಿಲ ನೀತಿ.

ಈ ಎಲ್ಲಾ ನಕಾರಾತ್ಮಕ ಕಾರ್ಯರೀತಿಗಳನ್ನು ನಿಲ್ಲಿಸಿ, ಲೆನಿನ್‌ವಾದಿ ಪ್ರಜಾತಾಂತ್ರಿಕ ಕೇಂದ್ರವಾದದ ನಿಯಮಗಳನ್ನು ಪುನಃ ಸ್ಥಾಪನೆ ಮಾಡುವುದು ಸುಲಭಸಾಧ್ಯವಾಗಿಲ್ಲ. ಇದಕ್ಕಾಗಿ ಕೇಂದ್ರ ಸಮಿತಿಯೇ ಇಡೀ ಪಕ್ಷ, ಸರಕಾರ, ಮತ್ತು ಸಾಮೂಹಿಕ ಸಂಘಟನೆಗಳಿಗೆ ಮೇಲ್ಪಂಕ್ತಿ ಹಾಕಬೇಕು ಎಂದು ಕಾ|| ಗೋರ್ಬಚೆವ್ ಕರೆಯಿತ್ತರು. ವಿವಿಧ ವಿಷಯಗಳ ವಿಜ್ಞಾನ ಮತ್ತು ತಂತ್ರಜ್ಞಾನ ಸಂಕೀರ್ಣಗಳ ಸ್ಥಾಪನೆ, ಕಾರ್ಮಿಕರಿಗೆ ಜೀವಾವಧಿಯುದ್ದಕ್ಕೂ ಮರು ಶಿಕ್ಷಣದ ವ್ಯವಸ್ಥೆ, ಉಚ್ಚಶಿಕ್ಷಣದ ಪುನರ್‌ರಚನೆ, ವಿವಿಧ ಕಾರ್ಖಾನೆ ಇತ್ಯಾದಿ ಉತ್ಪಾದನಾ ಘಟಕಗಳಲ್ಲಿ ಸಾಮಾಜಿಕ ಕಲ್ಯಾಣ ಸೇವೆಗಳನ್ನು ಯೋಜನೆಯಲ್ಲಿ ಭಾಗವಹಿಸುವುದು-ಮುಂತಾದವು, ಕಾ|| ಗೋರ್ಬಚೇವ್ ಕೇಂದ್ರಸಮಿತಿಯ ಮುಂದಿಟ್ಟ ಇತರ ಸೂಚನೆಗಳು.

ಪುನರ್‌ಸಂಘಟನೆಯ ನೀತಿಗಳನ್ನು ಸೋವಿಯತ್‌ಗಳು, ಟ್ರೇಡ್ ಯೂನಿಯನ್‌ಗಳು, ರಾಯಭಾರಿ ಸಿಬ್ಬಂದಿ, ರಾಷ್ಟ್ರೀಯ ಭದ್ರತಾ ಗುಪ್ತಚಾರ ಸಿಬ್ಬಂದಿ, ಸೈನ್ಯದ ಸಿಬ್ಬಂದಿ ಸಹ ಅಳವಡಿಸಿಕೊಳ್ಳಬೇಕೆಂದು ಕಾ|| ಗೋರ್ಬಚೇವ್ ಕರೆ ನೀಡಿದರು.

27ನೇ ಅಧಿವೇಶನ ಮತ್ತು ಅದರ ನಂತರದ ಕೇಂದ್ರಸಮಿತಿಯ ನಿರ್ಣಯಗಳು ಎಷ್ಟರ ಮಟ್ಟಿಗೆ ಜಾರಿಯಾಗಿವೆ ಎಂದು ಕಂಡುಹಿಡಿಯಲು ಪಕ್ಷದ ಸಮಾವೇಶ ಕರೆಯಬೇಕೆಂಬ ಸೂಚನೆ ಇತ್ತರು ಕಾ|| ಗೋರ್ಬಚೇವ್. ○

ಟೈವಾಕ್ ಕಾರ್ಮಿಕರ ಅನಿರ್ದಿಷ್ಟ ಮುಷ್ಕರ

ಹುಬ್ಬಳ್ಳಿಯ ಟೈವಾಕ್ ಕಾರ್ಖಾನೆಯ ಕಾರ್ಮಿಕರು ತಮ್ಮ ಬೇಡಿಕೆಗಳ ಈಡೇರಿಕೆಗಳಿಗಾಗಿ ಕಳೆದ ಫೆಬ್ರುವರಿ 16ರಿಂದ ಅನಿರ್ದಿಷ್ಟ ಮುಷ್ಕರ ನಡೆಸುತ್ತಿದ್ದಾರೆ. ಮಾರ್ಚ್ 24ರಂದು ಜಿಲ್ಲಾಧಿಕಾರಿಗಳ ಮಧ್ಯಸ್ಥಿಕೆಯಲ್ಲಿ ನಡೆದ ಸಂಧಾನ ಮಾತುಕತೆಗಳು ಕೂಡಾ ವಿಫಲವಾಗಿದ್ದು ಮುಷ್ಕರ ಮುಂದುವರಿಯುತ್ತಿದೆ. ಸರಕಾರ ಬೇಗನೇ ಮಧ್ಯ ಪ್ರವೇಶಿಸಿ ಕಾರ್ಮಿಕರಿಗೆ ನ್ಯಾಯ ದೊರಕಿಸಿ ಕೊಡಬೇಕೆಂದು ಕಾರ್ಮಿಕರ ಸಂಘ ಒತ್ತಾಯಿಸಿದೆ. ●

ಸಮುದಾಯದಲ್ಲಿ ಉಪನ್ಯಾಸ ಕಾರ್ಯಕ್ರಮ

ಸಮುದಾಯದ ಗುಲಬರ್ಗಾ ಘಟಕದ ಆಡಿಯಲ್ಲಿ 18-3-87 ರಂದು ಉಪನ್ಯಾಸ ಏರ್ಪಡಿಸಲಾಗಿತ್ತು. ಉಪನ್ಯಾಸಕರಾಗಿ ಸಮುದಾಯದ ಕೇಂದ್ರಸಮಿತಿ ಸದಸ್ಯ ಕಾ|| ಸಿ. ಆರ್. ಭಟ್‌ರವರನ್ನು ಕರೆಸಲಾಗಿತ್ತು. ಅವರು "ರಾಷ್ಟ್ರೀಯ ಐಕ್ಯತೆ ಮತ್ತು ಸಾಂಸ್ಕೃತಿಕ ಸವಾಲು"ಎಂಬ ವಿಷಯದ ಮೇಲೆ ಸುಮಾರು ಎರಡು ತಾಸು ಮಾತನಾಡಿದರು. ಸ್ವಾತಂತ್ರ್ಯ ಪೂರ್ವದಲ್ಲಿ ದೇಶದಲ್ಲಿಯ ಭಾಷೆ, ಜಾತಿ, ಪ್ರಾದೇಶಿಕತೆಗಳಂತಹ ವೈವಿಧ್ಯತೆಗಳನ್ನು ಬದಿಗಿಟ್ಟು ಭಾರತೀಯರಲ್ಲಿ ಒಗ್ಗಟ್ಟಾಗಿ ಹೋರಾಡಿದಾಗ ಮಾತ್ರ ನಮಗೆ ಸ್ವಾತಂತ್ರ್ಯ ಸಿಕ್ಕಿತು. ಸ್ವಾತಂತ್ರ್ಯ ನಂತರ ನಮ್ಮನ್ನಾಳುವವರು ಬಂಡವಾಳಶಾಹಿ ಧೋರಣೆ ಅನುಸರಿಸುತ್ತ ಬಂದಿದುರಿಂದಾಗಿ ಬಡತನ, ನಿರುದ್ಯೋಗ ಹೆಚ್ಚಾಗಿದೆ. ಅದರಂತೆ ಅಸಮಾನ ಆರ್ಥಿಕ ಬೆಳವಣಿಗೆಯಿಂದ ದೇಶದಲ್ಲಿಂದು ಸಾಮ್ರಾಜ್ಯಶಾಹಿ ಹಾಗೂ ಇತರ ಪ್ರತಿಗಾಮಿ ಶಕ್ತಿಗಳು ತಲೆ ಎತ್ತಿ ದೇಶದ ವಿಘಟನೆಗೆ ಹವಣಿಸುತ್ತಿವೆ. ಇಂತಹ ಸಂದರ್ಭದಲ್ಲಿ ಸಮುದಾಯದಂತ ಸಂಘಟನೆಗಳು ದೇಶದಲ್ಲಿಂದು ನಡೆಯುತ್ತಿರುವ ವಿಚ್ಛಿದ್ರಕಾರಿ ಶಕ್ತಿಗಳ ಪಿತೂರಿಯ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡಿಸಲು ಪ್ರಯತ್ನಿಸುವುದು ಸೂಕ್ತವೆಂದು ಕಾ|| ಸಿ. ಆರ್. ಭಟ್ ನುಡಿದರು. ಅವರು ಮುಂದುವರೆದು ಈ ವ್ಯವಸ್ಥೆಯನ್ನು ಬದಲಾಯಿಸುವುದು ಉತ್ಪಾದನೆಯಲ್ಲಿ ತೊಡಗಿರುವ ಶ್ರಮಿಕ ವರ್ಗ ಮತ್ತು ರೈತ ಕೃಷಿ ಕಾರ್ಮಿಕರನ್ನು ಸಂಘಟಿಸಿ ಹೋರಿ ಡಿದರೆ ಮಾತ್ರ ಸಾಧ್ಯ. ಸಮುದಾಯದಂತ ಸಾಂಸ್ಕೃತಿಕ ಸಂಘಟನೆ ಅಂತಹ ಬದಲಾವಣೆ ತರುವಲ್ಲಿ ಕೀಲೆಣ್ಣೆಯಂತೆ ಅಂತಹ ಹೋರಾಟಕ್ಕೆ ಚಾಲನೆ ನೀಡುವ ಕೆಲಸ ಮಾಡುವುದು. ಆದರೆ ಅದು ಬದಲಾವಣೆಯ ಹರಿಕಾರ ಆಗಲು ಸಾಧ್ಯವಿಲ್ಲವೆಂದು ಕಾ|| ಭಟ್ ವಿವರಿಸಿದರು. ಪ್ರಶ್ನೋತ್ತರಗಳೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ●

ಕುಂದಾಪುರ ಡಿ. ವೈ. ಎಫ್. ಐ. ಸಭೆ

ಡಿ. ವೈ. ಎಫ್. ಐ. ನ ಚರ್ಚ್ ರೋಡ್ ಸಮಿತಿಯ ವಾರ್ಷಿಕ ಮಹಾಸಭೆಯು ದಿನಾಂಕ 13-3-87 ರಂದು ಶ್ರೀಯುತ ಬಾಬು ಪೂಜಾರಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಯಲ್ಲಿ ಇತ್ತೀಚೆಗೆ ನಿಗೂಢ ರೀತಿಯಲ್ಲಿ ಕೊಲೆಯಾದ ವಿದ್ಯಾರ್ಥಿಗಳಾದ ಪದ್ಮಲತಾ ಮತ್ತು ಲೋಕಯ್ಯ ಪೂಜಾರಿಯ ಸಾವಿನ ಬಗ್ಗೆ ಸಿ. ಓ. ಡಿ. ತನಿಖೆಗೆ ಒತ್ತಾಯ ಪಡಿಸುವ ನಿರ್ಣಯ ಕೈಗೊಳ್ಳಲಾಯಿತು. ಸಭೆಗೆ ಮುಖ್ಯ ಅತಿಥಿಯಾಗಿ ರಾಜ್ಯ ಡಿ.ವೈ.ಎಫ್.ಐ.ನ ಅಧ್ಯಕ್ಷರಾದ ಮಹಾಬಲ ವಡೇರಹೋಬಳಿಯವರು ಆಗಮಿಸಿದ್ದರು. ಮುಂದಿನ ಸಾಲಿನ ಹೊಸ ಕಮಿಟಿಯನ್ನು ರಚಿಸಲಾಯಿತು. ಕೆ ಸಂತೋಷ್ ಕುಮಾರ್ ರವರನ್ನು ಅಧ್ಯಕ್ಷರಾಗಿಯೂ, ಎಚ್. ನರಸಿಂಹರವರನ್ನು ಕಾರ್ಯದರ್ಶಿಯಾಗಿಯೂ ಆರಿಸಿ, 15 ಸದಸ್ಯರ ಹೊಸ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಕೋಣಿ ಗ್ರಾಮದಲ್ಲಿ ತಾಲೂಕು ಸಮಾವೇಶಕ್ಕೆ 15 ಮಂದಿ ಪ್ರತಿನಿಧಿಗಳಾಗಿ ಭಾಗವಹಿಸಬೇಕೆಂದು ನಿರ್ಣಯಿಸಲಾಯಿತು. ○

ಅಲ್ಲಲ್ಲಿ ಏನೇನು ?

ಬೆಂಗಳೂರು

ದಿನಾಂಕ 8-4-87 ರಂದು 5 ಗಂಟೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಪ. ಬಂಗಾಲ ಮತ್ತು ಕೇರಳ ಎಡರಂಗ ಮತ್ತು ಎಡ ಪ್ರಜಾಪ್ರಭುತ್ವರಂಗ ವಿಜಯೋತ್ಸವವನ್ನು ಸಿ.ಪಿ.ಐ. (ಎಂ) ಸಿ. ಪಿ. ಐ., ಮತ್ತು ಜನತಾ ಪಕ್ಷ ಆಚರಿಸಲಿದೆ.

ಸಿ. ಪಿ. ಐ. (ಎಂ) ಮುಖಂಡರಾದ ಸೂರ್ಯನಾರಾಯಣರಾವ್, ಸಿ.ಪಿ.ಐ. ಮುಖಂಡರಾದ ಬಿ. ವಿ. ಕಕ್ಕಿಲಾಯಿ ಮತ್ತು ಜನತಾ ಪಕ್ಷದಿಂದ ರಾಮಕೃಷ್ಣ ಹೆಗಡೆಯವರು ಮಾತನಾಡಲಿರುವರು.

ದಿನಾಂಕ 5-4-87 ರಂದು ಮಧ್ಯಾಹ್ನ 2 ಗಂಟೆಗೆ ಎನ್. ಜಿ. ಓ. ಹಾಲ್‌ನಲ್ಲಿ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ವತಿಯಿಂದ ಮಹಿಳೆಯರ ಸಭೆ ಕರೆಯಲಾಗಿದೆ. ಈ ಸಂಘಟನೆಯ ಕೇಂದ್ರ ಸಮಿತಿ ಸದಸ್ಯರಾದ ಕಾ|| ಹರಣಿ ಕಕ್ಕೇರಿಯವರು ಹಾಜರಾಗುತ್ತಾರೆ.

ವರ್ಣದ್ವೇಷ ನೀತಿಗೆ ಕಳಸದಲ್ಲಿ ಪ್ರತಿಭಟನೆ

ವರ್ಣದ್ವೇಷ ನೀತಿ ಮತ್ತು ದಕ್ಷಿಣ ಆಫ್ರಿಕಾದ ಅಲ್ಪಸಂಖ್ಯಾತರಾದ ಬಿಳಿಯರು ಕರಿಯರ ಮೇಲೆ ಸತತವಾಗಿ ಅಮಾನುಷ ದಬ್ಬಾಳಿಕೆಯನ್ನು ನಡೆಸುತ್ತಾ ಬಂದಿರುತ್ತಾರೆ.

ಕೇಂದ್ರ ಕಾರ್ಮಿಕ ಸಂಘಗಳ ಕರೆಯಂತೆ ದಿನಾಂಕ 21-3-87 ರಂದು ಕಳಸದಲ್ಲಿ ಕಾಂ. ಕೆ. ಸುಕುಮಾರ್ ಹಾಗೂ ಅಣ್ಣಯ್ಯನವರ ನೇತೃತ್ವದಲ್ಲಿ ಸುಮಾರು 200ಕ್ಕೂ ಹೆಚ್ಚು ಜನ ಕೆಲಸ ನಿಲ್ಲಿಸಿ ಮೆರವಣಿಗೆ ನಡೆಸಿದರು. ದಕ್ಷಿಣ ಆಫ್ರಿಕಾದ ವರ್ಣದ್ವೇಷಿ ಅಧ್ಯಕ್ಷ ಬೋತಾರವರ ಪ್ರತಿರೂಪವನ್ನು ಸುಟ್ಟುಹಾಕಲಾಯಿತು.

ಸೂಪರ್ ಕಂಪ್ಯೂಟರ್ ಅಗತ್ಯವೇ ?

[2ನೇ ಪುಟದಿಂದ]

ಇಂತಹ ಹೀನಾಯವಾದ ಷರತ್ತುಗಳಿಗೆ ಒಪ್ಪಿ, ಹಳೆಯ ಮಾದರಿ ಸೂಪರ್ ಕಂಪ್ಯೂಟರ್ ಕೊಳ್ಳುವ ತರಾತುರಿ ನಮ್ಮ ಸರ್ಕಾರಕ್ಕೆ ಏಕೆ? ಈ ಸೂಪರ್ ಕಂಪ್ಯೂಟರ್‌ನ ಬೆಲೆ ಸುಮಾರು 100 ರಿಂದ 150ಕೋಟಿ ರೂ.ಗಳಷ್ಟಾಗಬಹುದು. ಇಷ್ಟು ಹಣ ತೆತ್ತು ವಿದೇಶಿ ನಿಯಂತ್ರಣವೊಳಗೆ- ಸೀಮಿತ ಉಪಯೋಗಗಳಿಗಾಗಿ ಕೊಳ್ಳುವುದು ಸಾಧುವೆನಿಸುವುದಿಲ್ಲ. ಅಷ್ಟೇ ಅಲ್ಲದೆ ಷರತ್ತುಗಳ ಪ್ರಕಾರ ನಾವು ಉಪಯೋಗಿಸಬಹುದಾದ ನಾಲ್ಕೂ ಕ್ಷೇತ್ರಗಳಲ್ಲಿ ನಮ್ಮ ವಿಜ್ಞಾನ ಮತ್ತು ತಂತ್ರಜ್ಞಾನದ ಮಟ್ಟ ಸೂಪರ್ ಕಂಪ್ಯೂಟರ್ ಬಳಸುವ ಮಟ್ಟಕ್ಕೆ ಬರಲು ಇನ್ನೂ ಹತ್ತು ವರ್ಷಗಳಾದರೂ ಹಿಡಿಸಿತು. ಉದಾಹರಣೆಗೆ ಸಹಕಾರ ಉದ್ದೇಶಿಸಿರುವ ಹವಾಮಾನ ಅಧ್ಯಯನವನ್ನೇ ತೆಗೆದುಕೊಳ್ಳಿ. ಇಂಗ್ಲೆಂಡಿನಲ್ಲಿ ಇಂತಹ ಅಧ್ಯಯನಕ್ಕೆ ಬೇಕಾದ ಹವಾಮಾನ ಗಣಿತದ ಮಾದರಿ ತಯಾರಿಸಲು ಸುಮಾರು 1000 ಭೂಮಿ ಹವಾಮಾನ ಕೇಂದ್ರಗಳು, ಹಲವಾರು ಉಪಗ್ರಹ ಬಲೂನು ಆಧಾರಿತ ಹವಾಮಾನ ಅಳತೆ ಕೇಂದ್ರಗಳು ಕೊಡುವ ಸುಮಾರು 1 ಲಕ್ಷ ಕೋಟಿ ಮಾಹಿತಿ ಬೇಕಾಯಿತು. ಇಂಗ್ಲೆಂಡಿನ ಹಲವಾರು ಪಟ್ಟು ಗಾತ್ರವಿರುವ ಭಾರತದಲ್ಲಿ ಇಂತಹ ಮಾದರಿ ತಯಾರಿಸಲು ಇನ್ನೂ ಹೆಚ್ಚು ಮಾಹಿತ ಅಧ್ಯಯನಬೇಕು. ಇಂತಹ ಮಾದರಿ ನಿರ್ಮಿಸದೆ ಸೂಪರ್ ಕಂಪ್ಯೂಟರ್ ಯಾವ ಪ್ರಯೋಜನಕ್ಕೂ ಬರುವುದಿಲ್ಲ. ನೆರೆ, ಸುಂಟರಗಾಳಿಯಂತಹ ಪ್ರಕ್ಷೋಪಗಳನ್ನು 48 ಗಂಟೆಗಳ ಮೊದಲು ಮುನ್ಸೂಚನೆ ನೀಡುವ ಕೃಷಿಗೆ ಬೇಕಾದ ಮುನ್ಸೂಚನೆ ನೀಡುವ ಪರಿಣತಿ ನಮ್ಮ ಹವಾಮಾನ ಪರಿಣತರಿಗೆ ಈಗಾಗಲೇ ಇದೆ.

ಈಗಾಗಲೇ ನಮ್ಮ ದೇಶದಲ್ಲಿ ಮೈಕ್ರೋ, ಮಿನಿ ಕಂಪ್ಯೂಟರ್‌ಗಳು ತಯಾರಾಗುತ್ತಿವೆ. ದೊಡ್ಡ (main frame) ಕಂಪ್ಯೂಟರ್‌ಗಳನ್ನು ನಿರ್ಮಿಸಲು ಯೋಜನೆಗಳಿವೆ. ಈ ಅನುಭವವನ್ನು ಉಪಯೋಗಿಸಿಕೊಂಡು ಸೂಪರ್ ಕಂಪ್ಯೂಟರ್ ನಾವಾಗಿ ನಿರ್ಮಿಸುವ ದೂರಗಾಮಿ ಯೋಜನೆಗಳನ್ನು ಹಾಕಿಕೊಳ್ಳುವುದು ಹೆಚ್ಚು ಸೂಕ್ತ. ಅದೇ ಅಲ್ಲದೆ ಮೂಲಭೂತ ವಿಜ್ಞಾನ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಹೆಚ್ಚು ಸಂಶೋಧನೆಗೆ ಅವಕಾಶ ಮಾಡಿಕೊಡುವುದು ಮುಖ್ಯ. ಇವ್ಯಾವು ಇಲ್ಲದೆ 21ನೇ ಶತಮಾನದ ಪ್ರತೀಕವಾದ ಒಂದು 'ಆಟಿಕೆ'ಯಾಗಿ ಸೂಪರ್ ಕಂಪ್ಯೂಟರ್‌ನ ಆಮದನ್ನು ವಿರೋಧಿಸಬೇಕು. ಸೂಪರ್ ಕಂಪ್ಯೂಟರನ್ನು ಸರ್ಕಾರ ತನ್ನ ವಿರೋಧಿ ಪಕ್ಷಗಳ, ವ್ಯಕ್ತಿಗಳ ಮೇಲೆ ನಿಗಾ ಇಡಲು ದಮನಕಾರಿ ಕ್ರಮಗಳಿಗೂ ಬಳಸಬಹುದು ಎಂದು ನೆನಪಿಡಬೇಕು. ಇದರ ಅರ್ಥ ನಮಗೆ ಸೂಪರ್ ಕಂಪ್ಯೂಟರ್ ಎಂದೂ ಬೇಡವೆಂದಲ್ಲ. ಈಗಿನ ಹಂತದಲ್ಲಿ ಈಗ ಕೊಡಲೊಪ್ಪಿಕೊಂಡಿರುವ ಮಾದರಿಯ ಸೂಪರ್ ಕಂಪ್ಯೂಟರ್ ಇಂತಹ ಅವಮಾನಕಾರಿ ಷರತ್ತುಗಳೊಂದಿಗೆ ಬೇಕಾಗಿಲ್ಲ. ○

ವಿಶ್ವದ ಅತ್ಯಂತ ದೊಡ್ಡ ಸಾಲಗಾರ - ಅಮೇರಿಕಾ ದೇಶ

ಪ್ರಪಂಚದ ದೇಶಗಳಲ್ಲೆಲ್ಲ ಅತ್ಯಂತದೊಡ್ಡ ಸಾಲಗಾರ ಯಾರು? ಸಾಮ್ರಾಜ್ಯಶಾಹಿ ರಾಷ್ಟ್ರಗಳ ಮುಂದಾಳುವಾಗಿರುವ ಮತ್ತು ವಿಶ್ವದ ಅತ್ಯಂತ ಶ್ರೀಮಂತ ದೇಶವೆಂದು ಹೆಗ್ಗಳಿಕೆ ಪಟ್ಟುಕೊಳ್ಳುತ್ತಿರುವ ಅಮೇರಿಕಾ ಸಂಯುಕ್ತ ಸಂಸ್ಥಾನಕ್ಕೆ ಈ 'ಗೌರವ' ಪ್ರಾಪ್ತಿಯಾಗಿದೆ!

ಅಮೇರಿಕಾ ಸಂಯುಕ್ತ ಸಂಸ್ಥಾನದ 1986ರ ಚಾಲ್ತಿಲೆಕ್ಕ [Current Account]ದ ಸ್ಥಿತಿಗತಿಯನ್ನು ಅಭ್ಯಾಸ ಮಾಡಿರುವ ವಾರ್ತಾ ಸಂಸ್ಥೆಗಳು ಕಳೆದ ವರ್ಷ ಈ ದೇಶದ ಸಾಲ 220 ಬಿಲಿಯನ್ ಡಾಲರುಗಳನ್ನು ಮೀರಿದೆಯೆಂದು ಅಂದಾಜು ಮಾಡಿದೆ. ಅದಕ್ಕಿಂತ ಹಿಂದಿನವರ್ಷವಾದ 1985ರಲ್ಲಿ ಜಗತ್ತಿನ ಸಾಲಗಾರರಲ್ಲಿ ಮೊದಲನೇ ಸ್ಥಾನಗಳಿಸಿದ್ದ ಬ್ರೆಜಿಲ್‌ದೇಶವನ್ನು ಈ ವರ್ಷ ಅಮೇರಿಕಾ ಸಂಯುಕ್ತ ಸಂಸ್ಥಾನವು ಬಹಳ ಹಿಂದಕ್ಕೆ ತಳ್ಳಿ ತಾನೇ ವಿಶ್ವದ ಅತ್ಯಂತ ದೊಡ್ಡ ಸಾಲಗಾರನೆಂಬ ಪದವಿಗಳಿಸಿದೆ.

ಕಳೆದ ಹದಿನೈದು ವರ್ಷಗಳಿಂದಲೂ ಅಮೇರಿಕಾವು ರಫ್ತುಮಾಡುತ್ತಿದ್ದ ಸರಕುಗಳಿಗಿಂತ ಅದು ಆಮದು ಮಾಡಿಕೊಳ್ಳುತ್ತಿದ್ದ ಸರಕುಗಳ ಪ್ರಮಾಣ ಜಾಸ್ತಿಯಾಗಿತ್ತಂತೆ. ಹಾಗಾಗಿ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಮೇರಿಕಾದ ವ್ಯಾಪಾರ ನಷ್ಟದ ಬಾಬತ್ತಾಗುತ್ತಿದೆ. ಅಂತರಾಷ್ಟ್ರೀಯ ಸರಕುಗಳ ವ್ಯಾಪಾರದಲ್ಲಿ ಉಂಟಾಗುತ್ತಿದ್ದ ಈ ಕೊರತೆಯನ್ನು ಅಮೇರಿಕಾವು ವಿದೇಶಗಳಲ್ಲಿ ತಾನು ತೊಡಗಿಸಿದ್ದ ಬಂಡವಾಳದಿಂದ ಬರುತ್ತಿದ್ದ ಆದಾಯ ಮತ್ತು ಸೇವೆಗೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಮುಖ್ಯವಾಗಿ ಪ್ರವಾಸೋದ್ಯಮಮತ್ತು ವಿದೇಶಿ ಸಾಲಗಳಿಂದ ತಾನು ಗಳಿಸುತ್ತಿದ್ದ ಬಡ್ಡಿಯ ಮುಖಾಂತರ ನೀಗಿಕೊಳ್ಳುತ್ತಿತ್ತು. ಆದರೆ ಈಗ ಅಮೇರಿಕಾಕ್ಕೆ ವಿದೇಶೀ ಸರಕುಗಳ ಪ್ರವಾಹವೇ ಹರಿದು ಬರುತ್ತಿದೆ. ಅಮೇರಿಕಾವು ವಿದೇಶಗಳಲ್ಲಿ ತೊಡಗಿಸಿರುವುದಕ್ಕಿಂತ ಎಷ್ಟೋ ಪಾಲು ಜಾಸ್ತಿ ವಿದೇಶಿ ಬಂಡವಾಳಗಾರರು ಅಮೇರಿಕಾದಲ್ಲಿ ತಮ್ಮ ಬಂಡವಾಳವನ್ನು ತೊಡಗಿಸಿದ್ದಾರೆ. ಹೀಗಾಗಿ ಅಮೇರಿಕದ ಅಂತರಾಷ್ಟ್ರೀಯ ವಾಣಿಜ್ಯದಲ್ಲಿ ತೀವ್ರ ಕೊರತೆಯುಂಟಾಗಿದೆ.

ಈ ಕೊರತೆ ಪರಿಸ್ಥಿತಿ ಇನ್ನೂ ಮುಂದುವರಿಯುವುದೆಂದೂ 1990ರ ಹೊತ್ತಿಗೆ ಅಮೇರಿಕಾವು 1000 ಬಿಲಿಯನ್‌ಡಾಲರ್‌ಗಳಷ್ಟು ಸಾಲದ ಹೊರೆ ಹೊತ್ತ ದರಿದ್ರನೆಂಬ ಖ್ಯಾತಿಗಳಿಸಬೇಕಾಗುವುದೆಂದೂ ಅಮೇರಿಕದ ಅರ್ಥಶಾಸ್ತ್ರಜ್ಞರು ಎಚ್ಚರಿಸಿದ್ದಾರೆ.

ಬಿಗಡಾಯಿಸುತ್ತಿರುವ ಈ ಸಾಲದ ಹೊರೆಯಿಂದಾಗಿ ಅಮೇರಿಕಾವು ಪ್ರತಿ ವರ್ಷ ಅಪಾರ ಮೊತ್ತದ ಹಣವನ್ನು ಬಡ್ಡಿಯ ರೂಪದಲ್ಲಿ ವಿದೇಶಗಳಿಗೆ ಸಂದಾಯ ಮಾಡಬೇಕಾಗುತ್ತದೆಂದೂ ಇದು ಅಮೇರಿಕನ್ ಪ್ರಜೆಗಳ ಜೀವನ ಮಟ್ಟವನ್ನು ಇನ್ನಷ್ಟು ಕೆಳಗಿಳಿಸುವುದೆಂದೂ ಅರ್ಥಶಾಸ್ತ್ರಜ್ಞರ ಅಭಿಪ್ರಾಯ.

ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸೂಕ್ಷ್ಮ ಸಂವೇದಿಯಾದ ಮೈಕ್ರೊಚಿಪ್ ಉದ್ಯಮ ಮತ್ತು ವಿದ್ಯುತ್ ಅರೆನಿರ್ವಾಹಕ [Semiconductor] ಉದ್ಯಮಗಳು ವಿದೇಶೀ ಬಂಡವಾಳಗಾರರ ಕೈಸೇರುವುದನ್ನು ತಪ್ಪಿಸಲು ರೀಗನ್ ಆಡಳಿತೆ ಹತಾಶ ಪ್ರಯತ್ನ ನಡೆಸುತ್ತಿದೆಯೆಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ. 'ಕೆಲವು ಉದ್ಯಮಗಳನ್ನು ಯಾರು ಯಾರೋ ಕಬಳಿಸುವುದಕ್ಕೆ ಬಿಡಬಾರದು' ಎಂದು ರೀಗನ್ ಆಡಳಿತೆಯ ಹಿರಿಯ ಅಧಿಕಾರಿಯೊಬ್ಬರು ಉದ್ಗರಿಸಿದ್ದಾರಂತೆ. ಕಂಪ್ಯೂಟರ್ ಉದ್ಯಮ ಮತ್ತು ಅರೆನಿರ್ವಾಹಕಗಳ ಕ್ಷೇತ್ರದಲ್ಲಿ ಜಪಾನಿನ ಪ್ರಬಲ ಸ್ಪರ್ಧೆಯನ್ನು ಹಿಮ್ಮೆಟ್ಟಿಸಲು ಸಾಧ್ಯವಾಗದೇ ರೀಗನ್ ಆಡಳಿತೆ ಗೋಳಾಡುತ್ತಿದೆ. ಇದು ಸಾಮ್ರಾಜ್ಯಶಾಹಿ ರಾಷ್ಟ್ರಗಳ ನಡುವೆ ಇನ್ನಷ್ಟು ಹರಿತವಾಗುತ್ತಿರುವ ವೈರುಧ್ಯಗಳ ಸಂಕೇತ.

'ಇದೊಂದು ಟೈಂ ಬಾಂಬ್. ಇದರ ಬಾಲಕ್ಕೆ ಬೆಂಕಿ ಹಚ್ಚಿ ಆಗಿದೆ ಮತ್ತು ಅದು ಉರಿಯುತ್ತಿದೆ. ಇನ್ನೆರಡು ವರ್ಷಗಳಲ್ಲಿ ಏನಾಗುತ್ತೋ ಹೇಳಲು ಸಾಧ್ಯವಿಲ್ಲ' ವೆಂದು ಅಲನ್ ಸಿನಾಯ್ ಎಂಬ ಅಮೇರಿಕನ್ ಅರ್ಥಶಾಸ್ತ್ರಜ್ಞರು ಪ್ರಲಾಪಿಸಿದ್ದಾರೆ!

○

ಸ್ಪೈಯಿನ್‌ನಲ್ಲಿ ಅಮೇರಿಕನ್ ನೆಲೆಯ ವಿರುದ್ಧ ಪ್ರತಿಭಟನೆ

ಅಮೇರಿಕಾದ ರಕ್ಷಣಾ ಕಾರ್ಯದರ್ಶಿ ಕಾಸ್ಪರ್ ವೈನ್‌ಬರ್ಗರ್ ಅವರ ಪರಿಚಯ ಯಾರಿಗಿಲ್ಲ? ವೈನ್‌ಬರ್ಗರ್ ಸೀಮಿತ ಅಣುಯುದ್ಧದಲ್ಲಿ ಅಮೇರಿಕವು ಜಯಗಳಿಸಲು ಸಾಧ್ಯವೆಂಬ ವಿಚಿತ್ರ ಸಿದ್ಧಾಂತದ ಪ್ರಬಲ ಪ್ರತಿಪಾದಕರು. ವೈನ್‌ಬರ್ಗರ್ ಮತ್ತು ಅಮೇರಿಕಾದ ಶಸ್ತ್ರಾಸ್ತ್ರ ನಿಯಂತ್ರಣ ಖಾತೆಯ ನಿರ್ದೇಶಕ ಯೂಜಿನ್ ರೊಸ್ಟೋವ್ ಜಂಟಿಯಾಗಿಸಿದ್ಧಪಡಿಸಿದ್ಧ ಈ ವಾದದ ಪ್ರಕಾರ ಸೀಮಿತ ಅಣುಯುದ್ಧವೊಂದು ನಡೆದರೆ ಸುಮಾರು 50 ಮಿಲಿಯ ಅಮೇರಿಕನರು ಅದರಿಂದಾಗಿ ಸಾಯಬಹುದು. ಅದು ಅಮೇರಿಕಕ್ಕೆ ಒಪ್ಪಿಗೆ. ಆದರೆ ಅಷ್ಟು ಅಮೇರಿಕನ್ನರು ಸಾಯಬೇಕಾದರೆ 100 ಮಿಲಿಯ ರಶ್ಯನರಾದರೂ ಸಾಯಬೇಕಾಗುತ್ತದೆ. ಅಂದರೆ ಇದು ಅಮೇರಿಕಾದ ಪಾಲಿಗೆ ವಿಜಯ! ಇಂತಹ ಅಮಾನುಷ ಮತ್ತು ರಕ್ತಪಿಪಾಸುವಾದ ಸಿದ್ಧಾಂತದ ಪ್ರತಿಪಾದಕ ಕಾಸ್ಪರ್ ವೈನ್‌ಬರ್ಗರ್ ಕಳೆದ ವರ್ಷ ಭಾರತಕ್ಕೂಬಂದು ಇಲ್ಲಿನ ಆಯಕಟ್ಟಿನ ರಕ್ಷಣಾ ಕೈಗಾರಿಕೆಗಳನ್ನು ನೋಡಿಕೊಂಡು ಹೋಗಿದ್ದರು. ಭಾರತ ಸರಕಾರ ಅವರಿಗೆ ಗೌರವ ಸ್ವಾಗತವನ್ನೂ ನೀಡಿತ್ತು. ಜೀವ ವಿರೋಧಿಯಾದ ಸಾಮ್ರಾಜ್ಯಶಾಹಿಯ ಈ ಪ್ರತಿನಿಧಿ ಕಳೆದ ಮಾರ್ಚ್15ರಂದು ಸ್ಪೈಯಿನ್‌ಗೆ ಭೇಟಿಯಿತ್ತರು.

ಭೇಟಿಯ ಉದ್ದೇಶ - ಮಾದ್ರಿದ್‌ನ ಬಳಿಯಿರುವ ಅಮೇರಿಕಾದ ಎಪ್ಪತ್ತೆರಡು ಎಫ್. 16 ಫೈಟರ್ ವಿಮಾನಗಳನ್ನು ಅಲ್ಲಿಯೇ ಉಳಿಯಗೊಡುವಂತೆ ಸ್ಪಾನಿಶ್ ಸರಕಾರದ ಮನವೊಲಿಸುವುದು, ಆದರೆ ಸ್ಪೈಯಿನ್ನಿನ ಜನತೆ ಯುದ್ಧಕೋರ ಸಾಮ್ರಾಜ್ಯಶಾಹಿಯ ಈ ಪ್ರತಿನಿಧಿಗೆ ನೀಡಿದ ಸ್ವಾಗತು ಬೇರೆಯೇ ರೀತಿಯದ್ದು. ಮಾದ್ರಿದ್ ನಗರದ ಪಕ್ಕದಲ್ಲಿರುವ ವಿಮಾನ ನೆಲೆಯ ಬಳಿಗೆ ಒಂದು ಲಕ್ಷ ಜನ ಪ್ರತಿಭಟನಕಾರರು ಮೆರವಣಿಗೆ ಕೊಂಡೊಯ್ದು ಸ್ಪೈಯಿನ್ ಇನ್ನೂ ನ್ಯಾಟೋ ಕೂಟದಲ್ಲಿರುವುದಕ್ಕೆ ವಿರೋಧ ವ್ಯಕ್ತಪಡಿಸಿದರು. ನ್ಯಾಟೋದಲ್ಲಿ ಸ್ಪೈಯಿನ್ ಉಳಿಯಬೇಕೇ ಬೇಡವೇ ಎನ್ನುವ ಬಗ್ಗೆ ಇನ್ನೊಮ್ಮೆ ರಾಷ್ಟ್ರೀಯ ಅಭಿಮತ ಸಂಗ್ರಹ ನಡೆಯಬೇಕೆಂದೂ ಅವರು ಆಗ್ರಹಿಸಿದರು. ನಾಲ್ಕು ಗಂಟೆಗಳ ಕಾಲ ಕಾಲ್ನಡಿಗೆಯಲ್ಲಿ ಸಾಗಿ ವೈಮಾನಿಕ ನೆಲೆಯ ಬೇಲಿಯ ಬಳಿ ಒಟ್ಟು ಸೇರಿದ ಪ್ರದರ್ಶನಕಾರರು ಸೈನಿಕರ ಮೇಲೆ ಕಲ್ಲುಗಳನ್ನೆಸೆದರು. 'ವೈನ್‌ಬರ್ಗರ್ ಸ್ಪೈಯಿನಿಗೆ ಬರುತ್ತಿರುವುದು ಸ್ಪೈಯಿನಿನಲ್ಲಿರುವ ಅಮೇರಿಕನ್ ಸೈನ್ಯದ ಪ್ರಮಾಣವನ್ನು ಕಡಿತಗೊಳಿಸುವ ಬಗ್ಗೆ ಮಾತುಕತೆಯಾಡುವ ಸಲುವಾಗಿ ಎಂದು ಸೈನಿಕ ಅಧಿಕಾರಿಯೊಬ್ಬರು ಪ್ರದರ್ಶನಕಾರರನ್ನು ಸಮಜಾಯಿಷಿ ಮಾಡಲು ಪ್ರಯತ್ನಿಸಿದಾಗ ಪ್ರದರ್ಶನಕಾರರು ಅದನ್ನು ಗೇಲಿ ಮಾಡಿದರು. ಪ್ರದರ್ಶನಕಾರರನ್ನು ಚದುರಿಸಲು ಪೋಲೀಸರು ಹೊಗೆ ಬಾಂಬುಗಳನ್ನು ಸ್ಫೋಟಿಸಿ ರಬ್ಬರ್ ಗುಂಡುಗಳನ್ನು ಹಾರಿಸಬೇಕಾಯಿತು. ಈ ತಿಕ್ಕಾಟದಲ್ಲಿ ಹಲವಾರು ಜನ ಗಾಯಗೊಂಡರೆಂದು ವರದಿಯಾಗಿದೆ.

ಎಫ್. 16 ವಿಮಾನಗಳನ್ನು ಮಾದ್ರಿದ್ ಬಳಿ ಎಲ್ಲರಿಗೂ ಕಾಣಿಸಿಕೊಳ್ಳುವ ಜಾಗದಿಂದ ಸ್ಪೈಯಿನಿನಲ್ಲಿರುವ ಬೇರೆ ಯಾವುದೇ ನೆಲೆಗೆ ಸಾಗಿಸಲು ತಾನು ಸಿದ್ಧವೆಂದೂ ಆದರೆ ಅವುಗಳ ಸ್ಪೈಯಿನಿನ ನೆಲದಿಂದ ತೆಗೆಯಲು ಸಾಧ್ಯವಿಲ್ಲವೆಂದೂ ವೇನ್‌ಬರ್ಗರ್ ಹೇಳಿದ್ದಾರೆ. ಯುರೋಪಿನಾದ್ಯಂತ ನಡೆಯುತ್ತಿರುವ ಪ್ರಬಲವಾದ ಯುದ್ಧ ವಿರೋಧಿ ಚಳುವಳಿಗಳ ಪರಿಣಾಮವಾಗಿ ಸ್ಪಾನಿಶ್ ಸರಕಾರ ಈ ರಾಜಿ ಒಪ್ಪಂದಕ್ಕೆ ಸಮ್ಮತಿಸುವುದು ಸಂಶಯಾಸ್ಪದವೆಂದೂ ವರದಿಯಾಗಿದೆ

●

ಪ. ಜರ್ಮನಿಯ - ಸೋವಿಯತ್ ಮೈತ್ರಿಗೆ ಕೋಹ್ಲ್ ಹಂಬಲ

ಕಳೆದ ವರ್ಷ ರೀಕ್‌ಜಾವಿಕ್ ಶೃಂಗ ಸಮ್ಮೇಳನ ವಿಫಲವಾದ ವೇಳೆ ಪ್ರಪಂಚದ ಎಲ್ಲಕಡೆ ಸೋವಿಯತ್ ಒಕ್ಕೂಟದ ಶಾಂತಿ ಪ್ರಸ್ತಾಪಗಳ ಬಗ್ಗೆ ವ್ಯಾಪಕ ಸಹಾನುಭೂತಿ ವ್ಯಕ್ತವಾದಾಗ ಅದನ್ನು ಸಹಿಸದೆ "ಮಿಖಾಯಿಲ್ ಗೊರ್ಬಚೋವ್ ಪ್ರಚಾರ ತಂತ್ರದಲ್ಲಿ ನಾಜೀ ಪ್ರಚಾರ ನಿಪುಣ ಜೋಸೆಫ್ ಗೊಬೆಲ್ಸ್‌ಗೆ ಸಮಾನವೆಂದಿದ್ದವರು ಯಾರು ಗೊತ್ತೇ? ಅವರೇ ಪ. ಜರ್ಮನಿಯ ಛಾನ್ಸಲರ್ ಹಲ್ಮುಟ್ ಕೊಹ್ಲ್, ಆದರೆ ಇದೇ ಕೊಹ್ಲ್ ಈಗ ಪ. ಜರ್ಮನಿ ಮತ್ತು ಸೋವಿಯತ್ ಒಕ್ಕೂಟಗಳ ನಡುವಿನ ಸಂಬಂಧ ಸುಧಾರಿಸಬೇಕೆಂದಿದ್ದಾರೆ! ಜನವರಿ ತಿಂಗಳಲ್ಲಿ ಎರಡನೇ ಬಾರಿಗೆ ಪ. ಜರ್ಮನಿಯ ಛಾನ್ಸಲರ್ ಆಗಿ ಅಧಿಕಾರಕ್ಕೆಬಂದ ಕೊಹ್ಲ್ ಪ.ಜರ್ಮನಿಯ ಪಾರ್ಲಿಮೆಂಟಿನ ಪ್ರಥಮ ಅಧಿವೇಶನದಲ್ಲೇ ಈ ಕರೆ ನೀಡಿದ್ದಾರೆ! ಪ. ಜರ್ಮನಿ ಮತ್ತು ಸೋವಿಯತ್ ಒಕ್ಕೂಟಗಳ ನಡುವಿನ ಮೈತ್ರಿಯುತ ಸಂಬಂಧಗಳು ತನ್ನ ಸರಕಾರಕ್ಕೆ ಅತೀ ಮುಖ್ಯವೆಂದು ಹೇಳಿರುವ ಕೊಹ್ಲ್ ಸೋವಿಯತ್ ಒಕ್ಕೂಟದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಸುಧಾರಣೆಗಳನ್ನೂ ಸ್ವಾಗತಿಸಿದ್ದಾರೆ. ಯುರೋಪಿನಲ್ಲಿ ನೆಲೆಗೊಳಿಸಲಾಗಿರುವ ಅಮೇರಿಕದ ಮತ್ತು ಸೋವಿಯತ್ ಒಕ್ಕೂಟದ ಮಧ್ಯಮ ದೂರದ ಕ್ಷಿಪಣಿಗಳನ್ನು ತೆಗೆದುಹಾಕುವ ಕುರಿತು ಮತ್ತು ವಿಶ್ವ ಶಾಂತಿಯ ಪ್ರಶ್ನೆಯಲ್ಲಿ ಪ. ಜರ್ಮನಿ ಮತ್ತು ಯುರೋಪಿನ ಇತರ ರಾಷ್ಟ್ರಗಳಿಗೆ ತುಂಬಾ ಆಸಕ್ತಿಯಿದೆಯೆಂದೂ ಕೊಹ್ಲ್ ಹೇಳಿದ್ದಾರೆ.

ಕೊಹ್ಲ್ ಅವರು ಹೇಳಿರುವ ಪ್ರಕಾರ ಪ. ಜರ್ಮನಿಗೆ ಸೋವಿಯತ್ ಒಕ್ಕೂಟ ಮಾತ್ರವಲ್ಲದೆಪೂರ್ವ ಜರ್ಮನಿಯ ಜೊತೆಗೂ ಹೆಚ್ಚಿನ ಸಹಕಾರ ಹಾಗೂ ಮೈತ್ರಿಯುತ ಸಂಬಂಧದಲ್ಲಿ ಆಸಕ್ತಿಯಿದೆ. ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ ಸಂರಕ್ಷಣೆಯಂತಹ ಕ್ಷೇತ್ರಗಳಲ್ಲಿ ಪ. ಜರ್ಮನಿ ಹಾಗೂ ಜರ್ಮನ್ ಪ್ರಜಾಪ್ರಭುತ್ವವಾದಿ ಗಣತಂತ್ರಗಳೊಳಗೆ ಪರಸ್ಪರ ಸಹಕಾರವೇರ್ಪಡಬೇಕೆಂದೂ ಅವರು ಹೇಳಿದ್ದಾರೆ.

○

ಇ. ಇ. ಸಿ. ಮತ್ತು ಕೊಮೆಕಾನ್ ನಡುವೆ ಮಾತುಕತೆ

ಐರೋಪ್ಯ ಆರ್ಥಿಕ ಸಮುದಾಯ (ಇ.ಇ.ಸಿ) ಮತ್ತು ಸೋವಿಯತ್ ಒಕ್ಕೂಟವನ್ನೂ ಸೇರಿದಂತೆ ಹತ್ತು ಸಮಾಜವಾದಿ ರಾಷ್ಟ್ರಗಳ ವಾಣಿಜ್ಯ ಕೂಟವಾಗಿರುವ ಕೊಮೆಕಾನ್ (ಕೌನ್ಸಿಲ್ ಫಾರ್ ಮ್ಯೂಚ್ಯುವಲ್ ಇಕನಾಮಿಕ್ ಅಸಿಸ್ಟೆನ್ಸ್) ನಡುವೆ ವಾಣಿಜ್ಯ ವ್ಯವಹಾರಗಳಿಗೆ ಸಂಬಂಧಿಸಿದಂತೆ ಮಾತುಕತೆಗಳು ನಡೆಯಲಿವೆ. ಮಾರ್ಚ್ 18ರಂದು ಜಿನೇವಾದಲ್ಲಿ ಸೇರಿದ್ದ ಈ ಎರಡು ಆರ್ಥಿಕ ಸಮುದಾಯಗಳ ಪ್ರತಿನಿಧಿಗಳು ಸಭೆ ಸೇರಿ ವ್ಯಾಪಾರ ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ಸಹಕಾರ ನಡೆಸುವ ಕುರಿತು ಎರಡು ದಿನಗಳ ಮಾತುಕತೆ ನಡೆಸಲು ಒಪ್ಪಿಕೊಂಡಿವೆ. ಕಳೆದ ಸೆಪ್ಟೆಂಬರದಲ್ಲಿನ ಮೊದಲ ಹಂತದ ಮಾತುಕತೆಗಳು ಈ ಸಿಟ್ಟನಲ್ಲಿ ನಡೆದಿದ್ದರೂ ಸಹಕಾರಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಪ್ರಶ್ನೆಗಳ ಬಗ್ಗೆ ಚರ್ಚಿಸಿರಲಿಲ್ಲ. ಮುಂದಿನ ಹಂತದ ಮಾತುಕತೆಗಳಲ್ಲಿ ಔಪಚಾರಿಕ ಸಂಬಂಧಗಳ ಕುರಿತು ಅಂಗೀಕಾರಕ್ಕೆ ಬರಲಾಗುವುದೆಂದು ಹೇಳಲಾಗಿದೆ. ಐರೋಪ್ಯ ಆರ್ಥಿಕ ಸಮುದಾಯದ ಪರವಾಗಿ ನಾಲ್ವರು ಪರಿಣಿತರ ನಿಯೋಗಕ್ಕೆ ಜಾನ್ ಮಸ್ಲೆನ್ ಅವರೂ 'ಕೋಮೆಕಾನ್' ತಂಡಕ್ಕೆ ಅದರ ಉಪಮುಂದಾಳು ಪೋಲೆಂಡಿನ ರ್‍ಝುಡ್, ಕುರೋವ್‌ಸ್ಕಿ ಅವರೂ ನೇತೃತ್ವ ವಹಿಸಲಿದ್ದಾರೆ.

●

"ಕಾಂಟ್ರಾಗಳನ್ನು ಒದ್ದೋಡಿಸಿ"

ನಿಕರಾಗುವಾದ ನೆರೆಹೊರೆಯ ರಾಷ್ಟ್ರಗಳಾದ ಹೊಂಡುರಾಸ್, ಎಲ್ ಸಾಲ್ವಡಾರ್ ಮತ್ತು ಕೋಸ್ಟಾರಿಕಾ 'ಕಾಂಟ್ರಾ'. ಭಯೋತ್ಪಾದಕರಿಗೆ ತರಬೇತು ನೀಡಿ ಅವರನ್ನು ನಿಕಾರಾಗುವಾದೊಳಗೆ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಛೂ ಬಿಡುತ್ತಿರುವುದು ಈಗ ಜಗತ್ತಿಗೆಲ್ಲ ಗೊತ್ತಿರುವ ವಿಚಾರ. ಆದರೆ ಈ ರಾಷ್ಟ್ರಗಳಲ್ಲೇ 'ಕಾಂಟ್ರಾ'ಗಳ ವಿರುದ್ಧ ಜನತೆಯ ಆಕ್ರೋಶ ಬೆಳೆಯುತ್ತಿದೆ. ನಿಕರಾಗುವಾದ ಆಂತರಿಕ ವಿಚಾರಗಳಲ್ಲಿ ತಮ್ಮ ರಾಷ್ಟ್ರಗಳು ಹಸ್ತಕ್ಷೇಪ ಮಾಡಬಾರದೆಂದು ಹೊಂಡುರಾಸ್, ಕೋಸ್ಟಾರಿಕಾ ಮತ್ತು ಎಲ್‌ಸಾಲ್ವಡೋರ್‌ನ ಜನರೇ ಒತ್ತಾಯಿಸಿ ಪ್ರತಿಭಟಿಸುತ್ತಿದ್ದಾರೆ. ನಿಕರಾಗುವಾದ ಉತ್ತರ ಗಡಿಗೆ ತಾಕಿದಂತೆ ದಕ್ಷಿಣ ಹೊಂಡುರಾಸ್‌ನಲ್ಲಿ ಅವಿತು ಕುಳಿತಿರುವ 'ಕಾಂಟ್ರಾ' ಗಳನ್ನು ಅಲ್ಲಿಂದ ಒದ್ದೋಡಿಸಬೇಕೆಂದು ಇತ್ತೀಚೆಗೆ ಹೊಂಡುರಾಸ್‌ನ 3000 ಮಂದಿ ಪ್ರಜೆಗಳು ಹೊಂಡುರಾಸ್‌ನ ರಾಜಧಾನಿಯಲ್ಲಿ ಮೆರವಣಿಗೆ ಕೊಂಡೊಯ್ದು ತಮ್ಮ ಸರಕಾರವನ್ನು ಒತ್ತಾಯಿಸಿದ್ದಾರೆ. ಅಲ್ಲಿಯ ಜನರು 'ಕೊಳಕು ಮಂದಿ-ಕಾಂಟ್ರಾಗಳನ್ನು ಒದ್ದು ಓಡಿಸಿ' ಎನ್ನುವ ಘೋಷಣೆಯನ್ನು ಅವರು ಕೂಗಿದರು. ಕಾಂಟ್ರಾಗಳ ವಿರುದ್ಧ ನಡೆದ ಪ್ರತಿಭಟನೆಗಳಲ್ಲಿ ಇದು ಅತ್ಯಂತ ದೊಡ್ಡದೆನ್ನಲಾಗಿದೆ.

REG No. BGW-148 MAG (2) PRB DECR 319/ -78

[1ನೇ ಪುಟದಿಂದ]

ಪಾಲಿಟ್‌ಬ್ಯೂರೊ ಅಭಿನಂದನೆ

ಕೇರಳದ ಜನತೆ ಅವರ ಮುಂದೆ ಕರುಣಾಕರನ್‌ರ ರಂಗ ಇಟ್ಟ ಅಕ್ರಮ ಕೊಡುಗೆಗಳನ್ನು ನಿರಾಕರಿಸಿ ಅವರ ಭ್ರಷ್ಟಾಚಾರ, ಒಳಜಗಳ ಗಳ ವಿರುದ್ಧ ಮತ ನೀಡಿದ್ದರ ಬಗ್ಗೆ ತೃಪ್ತಿ ವ್ಯಕ್ತಪಡಿಸುತ್ತದೆ.

ವಿವಿಧ ಜನವಿಭಾಗಗಳು, - ಕಾರ್ಮಿಕರು, ಯುವಕರು, ವಿದ್ಯಾರ್ಥಿಗಳು, ಮಹಿಳೆಯರು ಹಾಗೂ ನೌಕರರು ಕಾಂಗ್ರೆಸ್ [ಐ] ಹಾಗೂ ಯು. ಡಿ. ಎಫ್. ನ ಅಪಾಯಕಾರಿ ನೀತಿಗಳ ವಿರುದ್ಧ ಮಾಡಿದ ಹೋರಾಟ ಎಲ್. ಡಿ. ಎಫ್. ಗೆ ಜನಬೆಂಬಲ ಹೆಚ್ಚುವು ದಕ್ಕೆ ಕಾಣಿಕೆ ನೀಡಿದೆ. ಅದಕ್ಕಾಗಿ ಸಿ. ಪಿ. ಐ. [ಎಂ] ನ ಕಾರ್ಯ ಕರ್ತರು, ಬೆಂಬಲಿಗರು ಹಾಗೂ ಎಲ್. ಡಿ. ಎಫ್. ನ ಇತರ ಜೊತೆ ಗಾರರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಕೇರಳದ ವಿಜಯ ದೇಶದಲ್ಲಿ ಆರ್ಥಿಕ ನೀತಿಗಳ ಅಪಾಯಗಳ ವಿರುದ್ಧ ಹಾಗೆಯೇ ವಿಭಜಕ ಶಕ್ತಿಗಳ ವಿರುದ್ಧ ಜಾತ್ಯಾತೀತತೆ ಹಾಗೂ ರಾಷ್ಟ್ರೀಯ ಐಕ್ಯತೆಯ ಬಾವುಟವನ್ನು ಎತ್ತಿ ಹಿಡಿಯು ತ್ತಿರುವ ಎಡ ಪ್ರಜಾಸತ್ತಾತ್ಮಕ ಜಾತ್ಯಾತೀತ ಶಕ್ತಿಗಳ ಬೆಳವಣಿಗೆಗೆ ಉತ್ತೇಜನ ನೀಡುತ್ತಿದೆ ಎಂದು ಅಭಿಪ್ರಾಯ ಪಟ್ಟಿದೆ.

ಕೇರಳದಲ್ಲಿ ಸಂಗಾತಿಗಳ ಸಾವು

[1ನೇ ಪುಟದಿಂದ]

ಒಂದು ಖಂಡನೆಯ ಮಾತನಾಡಲಿಲ್ಲ. ಈ ಘಟನೆ ನಡೆದ ದಿನ ಮುಖ್ಯ ಮಂತ್ರಿಯಾಗಿ ಅಧಿಕಾರದಲ್ಲಿದ್ದರು ಅವರೇ ಎಂಬುದನ್ನು ನೆನಪಿನಲ್ಲಿಡ ಬೇಕು. ಅಷ್ಟು ಮಾತ್ರವಲ್ಲ ನಾಯ ನಾರ್‌ರವರ ಸರ್ಕಾರ ಅಧಿಕಾರ ಸ್ವೀಕ ರಿಸಿದ ಎರಡೇ ದಿನಗಳಲ್ಲಿಯೇ ಎಡಪ್ರ ಜಾಸತ್ತಾತ್ಮಕ ರಂಗದ ಆಡಳಿತದಲ್ಲಿ ಕಾನೂನು ವ್ಯವಸ್ಥೆ ಕುಸಿದುಹೋಗಿದೆ ಎಂದು ಬೊಬ್ಬೆ ಹಾಕುತ್ತಿದ್ದಾರೆ.

ಆಶ್ಚರ್ಯವೆನೆಂದರೆ "ದೇಶಾಭಿ ಮಾನಿ" ಯನ್ನು ಹೊರತುಪಡಿಸಿ ಯಾವ ಪತ್ರಿಕೆಯೂ ಈ ಹೃದಯ ಹಿಂಡುವ ಘಟನೆಯನ್ನು ವರದಿಮಾಡಿ ರಲಿಲ್ಲವೆಂಬುದು, ಮಲೆಯಾಳಿ ಪತ್ರಿಕೆ ಳಂತೂ ಈ ಬಗ್ಗೆ ಪೂರ್ಣನಿರ್ಲಕ್ಷತೆ ತೋರಿಸಿವೆ. ಇದನ್ನು ಕೇಳಿಯೂ ಬೆಂಗಳೂರಿನ ಪತ್ರಕರ್ತರೊಬ್ಬರು ಹಾಗಾದರೆ ಮಲೆಯಾಳಿ ಪತ್ರಿಕೆಗಳು ಪಕ್ಷಪಾತ ಮಾಡುತ್ತವೆ ಎನ್ನುತೀರಾ." "ಎಂದು ಪ್ರಶ್ನಿಸಿದರು. ಅದಕ್ಕೆ ಕಾ. ಇ.ಎಂ.ಎಸ್.ರವರು "ಹೌದು ಮಲೆ ಯಾಳಿ ಪತ್ರಿಕೆಗಳು ನಮ್ಮ ಪಕ್ಷದ ಬಗ್ಗೆ ಪೂರ್ಣ ಪಕ್ಷಪಾತ ಮಾಡುತ್ತವೆ. ಚುನಾವಣೆಯ ದಿನದವರೆಗೂ ಅಷ್ಟೇ ಏಕೆ ಮತದಾನ ಆದ ನಂತರವೂ ಕೂಡ ಮಲೆಯಾಳಿ ಪತ್ರಿಕೆಗಳು ಸಂಯುಕ್ತ ಪ್ರಜಾಸತ್ತಾತ್ಮಕ ರಂಗ ಜಯಗಳಿಸು ತ್ತಿದೆ ಎಂದೇ ಒತ್ತಿಒತ್ತಿ ಬರೆಯುತ್ತಿದ್ದವು" ಎಂದರು.

ಬಂಡವಾಳಶಾಹಿ ಪತ್ರಿಕೆಗಳು ಪ. ಬಂಗಾಳದಲ್ಲಿಯೂ ಅದೇ ರೀತಿ ಸಿ.ಪಿ. ಐ. (ಎಂ) ಬಗ್ಗೆ ತಮ್ಮ ಹುಚ್ಚು ದ್ವೇಷವನ್ನು ಪ್ರಕಟಗೊಳಿಸಿದವು ಎಂದು "ಪೀಪಲ್ಸ್‌ಡೆ ಮಾಕ್ರಸಿ"ವರದಿ ಮಾಡಿದೆ. "ದಿ ಟೆಲಿಗ್ರಾಫ್" ಎಂಬ ಪತ್ರಿಕೆಯ ಸಂಪಾದಕ ಎಂ ಜೆ.ಅಕ್ಬರ್ ಒಂದು ತಿಂಗಳ ಕಾಲ ಪೂರ್ತಿ ದಿನ ದಿನಕ್ಕೆ ಹೆಚ್ಚುತ್ತಾ ಹೋಗುವ ಪ್ರಚಾರ ವನ್ನು, ಎಡರಂಗ ಸೋಲುವುದು ಖಚಿತ ಎಂಬ ಅಪಪ್ರಚಾರವನ್ನು, ಜ್ಯೋತಿ ಬಸು ಸತ್‌ಗಾಚಿಯ ಕ್ಷೇತ್ರದಿಂದ ಸೋಲನ್ನಪ್ಪುತ್ತಾರೆ ಎಂಬ ಅಪ್ಪಟ ಸುಳ್ಳು ಪ್ರಚಾರವನ್ನು ಮಾಡಿದರು.

ದಾಖಲೆ ಸ್ಥಾಪಿಸಿದ ಪ್ರಚಾರ

ಕೇರಳದ ಚುನಾವಣಾ ಸಮರದಲ್ಲಿ ಕಾಂ. ಇ.ಎಂ.ಎಸ್.ರವರ ಪ್ರಚಾರ ಅತ್ಯಂತ ಪ್ರಮುಖವಾದ ಅಂಶ. ಫೆಬ್ರವರಿಯಲ್ಲಿ ಆರಂಭವಾಗಿ ಮಾರ್ಚ್ 21 ರವರೆಗೂ ಎಡೆ ಬಿಡದೆ ನಡೆದ ಅವರ ಪ್ರಚಾರಕ್ಕೆ ಎಣೆಯೇ ಇಲ್ಲ. 82ರ ಚುನಾವಣೆಗಳಲ್ಲಿ 200 ಪ್ರಚಾರ ಸಭೆಗಳನ್ನು ಉದ್ದೇಶಿಸಿ ಮಾತನಾಡಿದ್ದ ಇವರು 78 ವರ್ಷ ವಯಸ್ಸಿನಲ್ಲಿಯೂ 300 ಸಾರ್ವಜನಿಕ ಸಭೆಗಳನ್ನುದ್ದೇಶಿಸಿ ಮಾತನಾಡಿದರು. ಕಾರಿನಲ್ಲಿ 4 ವಾರಗಳಲ್ಲಿ 10, 000 ಕಿಮೀಗಳ ದೂರ ಪ್ರಯಾಣ ಮಾಡಿದರು.

5 ವರ್ಷದ ಯು ಡಿ ಎಫ್ ಆಳ್ವಿಕೆಯ ಪರಿಣಾಮವಾಗಿ ಇಂದು ಕೇರಳದಲ್ಲಿ ಮನುಷ್ಯರಿಲ್ಲ ಕೇವಲ ನಾಯರ್‌ಗಳು, ಬಿಲ್ಲವರು, ಮುಸ್ಲಿಮರು, ಕ್ರಿಶ್ಚಿಯನ್ನರು ಮಾತ್ರ ಇದ್ದಾರೆ. ಕೇರಳದಲ್ಲಿ ಮಾನವೀಯತೆಯನ್ನು ಪುನಃ ಸ್ಥಾಪಿಸಬೇಕಾದ ಎಡ ಪ್ರಜಾಸತ್ತಾತ್ಮಕ ರಂಗವನ್ನು ಚುನಾಯಿಸಿ ಎಂದು ಅವರ ಸಂದೇಶ. ಈ ಸಂದೇಶವನ್ನು ಪ್ರತಿ ನಗರ ಗುಡಿಸಲು, ಮನೆಗಳಿಗೂ ಕೊಂಡೊಯ್ದರು. ಇನ್ನೂ ಬಹಳ ಕಾಲ ಕಾಂ.ಇ.ಎಂ.ಎಸ್. ರವರ ಈ ಸಂದೇಶದ ಬಗ್ಗೆ ಜನ ಮಾತಾಡಿಕೊಳ್ಳುತ್ತಾರೆ, ನೆನಪಿನಲ್ಲಿಡುತ್ತಾರೆ.

ರಾಜಕೀಯದಲ್ಲಿ ಮಹತ್ವದ ಬದಲಾವಣೆ

(1ನೇ ಪುಟದಿಂದ)

ಯೊಡನೆ ಯಾವುದೇ ಸಂಬಂಧವಿಟ್ಟು ಕೊಳ್ಳುವುದು ಅಪಾಯಕಾರಿ ಎಂದರು.

ಮೈತ್ರಿ ಕೂಟಗಳ ರಾಜಕೀಯದ ಬಗ್ಗೆ ನೀವೇನು ಹೇಳುತ್ತೀರಿ ಇದು ಪತ್ರಕರ್ತರೊಬ್ಬರ ಪ್ರಶ್ನೆ.

ಕಾ|| ಇ.ಎಂ.ಎಸ್: ಮೈತ್ರಿಕೂಟಗಳ ರಾಜಕೀಯ ನಮ್ಮ ಪಕ್ಷದ ಸಂವಿಧಾನದಲ್ಲಿಯೇ ಬರೆದಿದೆ. ನಾವು ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ವಿವಿಧ ವರ್ಗಗಳ (ದುಡಿಯುವ ವಿವಿಧ ವರ್ಗಗಳ) ಮೈತ್ರಿಯ ಮೂಲಕವೇ ಸಾಧಿಸುತ್ತೇವೆ ಎಂದರೆ..

"ಆದರೆ ಅಧಿಕಾರದ ರಾಜಕೀಯದಲ್ಲಿ" ಅನೇ ಪತ್ರಕರ್ತರ ಮರುಪ್ರಶ್ನೆ.

ಕಾ||ಇ.ಎಂ.ಎಸ್: ನಾವು ಅಧಿಕಾರದ ರಾಜಕೀಯ ಮಾಡುವುದಿಲ್ಲ. ಅಧಿಕಾರದ ರಾಜಕೀಯ ಮಾಡುವುದೆಂದರೆ ಕರ್ನಾಟಕ ರಾಜ್ಯದಲ್ಲಿ, ರಾಮಕೃಷ್ಣ ಹೆಗ್ಗಡೆಯವರನ್ನು ನಮಗೆ ಒಂದು ಮಂತ್ರಿಸ್ಥಾನ ಕೊಡಿ ಎಂದು ಅಂಗಲಾಚುವುದು ಎಂದರ್ಥ ಆದರೆ ನಾವು ಮಂತ್ರಿಪದವಿ ಕೊಡಿ ಎಂದು ಅಂಗಲಾಚುವುದೂ ಇಲ್ಲ. ಅವರು ತಾವಾಗಿಯೇ ಕರೆದು ಕೊಟ್ಟರೂ ಬೇಡ ಎನ್ನುತ್ತೇವೆ. ಇದನ್ನೇ ನಾವು 1967ರಲ್ಲಿ ಮಾಡಿದ್ದು. ಆಗ ನಾವು ಕೇರಳ ಪ. ಬಂಗಾಳ ಹೊರತಾಗಿ ಬೇರೆ ಯಾವ ಸಂಯುಕ್ತರಂಗವನ್ನು ಆಗ ಆಡಳಿತ ನಡೆಸುತ್ತಿದ್ದ ಪಕ್ಷಗಳು ಅಂಗಲಾಚಿದರೂ ಹೋಗುವುದಿಲ್ಲ ಎಂದು ಉತ್ತರಿಸಿದರು. ●

ಸಿಐಟಿಯು – ಧರಣಿ ಸಹಿ ಸಂಗ್ರಹ

ಧಾರವಾಡ

ಸಿ.ಐ.ಟಿ.ಯು. ರಾಜ್ಯ ಸಮಿತಿಯ ಕರೆಯ ಮೇರೆಗೆ ಮಾರ್ಚ್ 26ರಂದು ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಸಿ.ಐ.ಟಿ.ಯು. ಕಾರ್ಯಕರ್ತರು ಧರಣಿ ನಡೆಸಿದರು. ಕಾರ್ಮಿಕರ ಬೃಹತ್ ಮೆರವಣಿಗೆಯ ನಂತರ ಬೇಡಿಕೆಗಳ ಮನವಿಯನ್ನು ವಿಧಾನ ಸಭೆಗೆ ಕಳುಹಿಸಲೆಂದು ಜಿಲ್ಲಾಧಿಕಾರಿಗಳಿಗೆಕೊಡಲಾಯಿತು. ಆಮೇಲೆ ಅಲ್ಲಿಯೇ ಬಹಿರಂಗ ಸಭೆ ನಡೆದು ಸಿ. ಐ. ಟಿ. ಯು. ಮುಖಂಡರಾದ ಕಾಂ. ಎಂ.ಬಿ.ಕಟ್ಟಿ, ಕಾಂ. ಬಾಲಾಜಿಸಂಪಗಾಂವಕರು,ಕಾಂ ವಿ.ಎಚ್ ಅಣ್ಣಿಗೇರಿ ಹಾಗೂ ಡಿ.ವೈ. ಎಫ್.ಐ.ನ ಕಾಂ. ಕೃಷ್ಣ ಕಟ್ಟಿ ಮಾತನಾಡಿ ರಾಜ್ಯ ಸರ್ಕಾರದ ಕಾರ್ಮಿಕ-ವಿರೋಧಿ ನೀತಿಯನ್ನು ಖಂಡಿಸಿದರು.

ಗುಲ್ಬರ್ಗ

ಸಿ.ಐ.ಟಿ.ಯು.ಗೆ ಸೇರಿದ ಎಂ.ಎಸ್. ಕೆ. ಮಿಲ್ಸ್ ವರ್ಕರ್ಸ್ ಯೂನಿಯನ್ ನೇತೃತ್ವದಲ್ಲಿ ಕಾರ್ಮಿಕರು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಸಾಮೂಹಿಕ ಸಹಿ ಸಂಗ್ರಹ ನಡೆಸಿ 26 ಪುಟಗಳ ಮನವಿಯನ್ನು ಉಪ ಕಾರ್ಮಿಕ ಕಮಿಷನ್ನರಿಗೆ ಸಲ್ಲಿಸಿದರು. ರಾಜ್ಯ ಸರ್ಕಾರ ಮಧ್ಯೆಪ್ರವೇಶಿಸಿ ಮಿಲ್‌ನ ಆಡಳಿತವರ್ಗ ಕಳೆದ ಎರಡು ವರ್ಷಗಳಲ್ಲಿ ಬಂದ್ ಮಾಡಿದ ಯಂತ್ರಗಳನ್ನು ಮತ್ತೆ ನಡೆಸಿ ಕಾರ್ಮಿಕರಿಗೆ ಕೆಲಸ ಸಿಗುವಂತೆ ಮಾಡಬೇಕೆಂದು ಕೂಡಾ ಮನವಿಯಲ್ಲಿ ಒತ್ತಾಯಿಸಲಾಗಿದೆಯೆಂದು ಯೂನಿಯನ್ ಪ್ರಧಾನಕಾರ್ಯದರ್ಶಿ ಕಾಂ. ಅಬ್ದುಲ್ ಖಾದರ್ ಹನ್ನುಭಾಯಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ' ●

ಈ ವಾರ....

★ ಶಿಕ್ಷಣದ ಬಗೆಗೆ ಸರ್ಕಾರಕ್ಕೆ ನಿಶ್ಚಿತವಾದ ಧೋರಣೆ ಇಲ್ಲದಿರುವುದೇ ಇದಕ್ಕೆಲ್ಲ ಕಾರಣ. ಮೊದಲು ಸರಕಾರಕ್ಕೆ ತಾನು ಮಾಡುವ ಕೆಲಸದಲ್ಲಿ ನಂಬಿಕೆಯಿರಬೇಕು. ಪಶ್ಚಿಮ ಬಂಗಾಳ ಸರ್ಕಾರ ಮಾಡಬಹುದಾದ ಕೆಲಸ ಕರ್ನಾಟಕ ಸರಕಾರಕ್ಕೆ ಯಾಕೆ ಸಾಧ್ಯವಾಗುವುದಿಲ್ಲವೆಂದರೆ, ಆ ಸರಕಾರಕ್ಕಿರುವ ಬದ್ಧತೆ ಈ ಸರಕಾರಕ್ಕಿಲ್ಲ. ಇದು ಸ್ಪಷ್ಟ.

–ಶ್ರೀ ಹಾ. ಮಾ. ನಾಯಕ, ಪ್ರಜಾವಾಣಿ, ಮಾ. 29
(ಇಂಗ್ಲಿಷ್ ಮಾಧ್ಯಮ ಪ್ರೌಢಶಾಲೆಗಳಿಗೆ ಸರ್ಕಾರದ ಅನುಮತಿ ನೀಡಿಕೆ ಕುರಿತು)

★ ಸಮಗ್ರ ಉಕ್ಕು ತಯಾರಿಕಾ ಉದ್ಯಮದಲ್ಲಿ ಖಾಸಗೀ ವಲಯಕ್ಕೆ ಪ್ರವೇಶಿಸಲು ಅವಕಾಶ ನೀಡುವ ಉದ್ದೇಶದಿಂದ ಲೈಸೆನ್ಸ್ ನೀಡಿಕೆಯನ್ನು ಉದಾರಗೊಳಿಸುವ ಬಗ್ಗೆ ಸರ್ಕಾರ ಯೋಚಿಸುತ್ತಿದೆ.

–ಇಕನಾಮಿಕ್ಸ್ ಟೈಮ್ಸ್ ಸುದ್ದಿ

★ ಜಪಾನಿನ ಇಲೆಕ್ಟ್ರಾನಿಕ್ ಉತ್ಪಾದನೆಗಳ ಮೇಲೆ ಇಮ್ಮಡಿ ಸುಂಕ ಹೇರುವ ಅಮೆರಿಕನ್ ಸರ್ಕಾರದ ಯೋಜನೆಗೆ ಸವಾಲು ಹಾಕಲು ಜಪಾನ್ ನಿರ್ಧರಿಸಿದೆ. ಅಮೆರಿಕಾದ ಯೋಜನೆ ವ್ಯಾಪಾರ ಮತ್ತು ಸುಂಕ ಕುರಿತಾದ ಅಂತರಾಷ್ಟ್ರೀಯ ಒಪ್ಪಂದಕ್ಕೆ ವಿರುದ್ಧವಾಗಿದೆಯೆಂದು ಜಪಾನಿನ ವಿದೇಶ ವ್ಯಾಪಾರ ಮಂತ್ರಿ ಹೇಳಿದ್ದಾರೆ.

–ಅಸೋಸಿಯೇಟ್ ಪ್ರೆಸ್ ಸುದ್ದಿ, ಮಾ. 29

★ ಅಮೆರಿಕಾ ತನ್ನ ಉತ್ಪಾದನೆಗಳ ಮಾರುಕಟ್ಟೆ ರಕ್ಷಿಸಿಕೊಳ್ಳಲು ಬೇರೆ ದೇಶಗಳ ಉತ್ಪಾದನೆಗಳ ಮೇಲೆ ಅಧಿಕ ಸುಂಕ ಹೇರುವ ಸಂರಕ್ಷಕ ನೀತಿ ಅನುಸರಿಸುವುದರಿಂದ ಯುರೋಪಿಯನ್ ಆರ್ಥಿಕ ಸಮುದಾಯದ 12 ದೇಶಗಳ ಆರ್ಥಿಕ ಪುನರುಜ್ಜೀವನಕ್ಕೆ ತೊಂದರೆಯಾಗುತ್ತದೆಯಾದ್ದರಿಂದ ಅದನ್ನು ಯುರೋಪು ದೃಢವಾಗಿ ವಿರೋಧಿಸುವುದೆಂದು ಫ್ರೆಂಚ್ ಪ್ರಧಾನಿ ಹೇಳಿದ್ದಾರೆ.

–ಯು. ಪಿ. ಐ. ಸುದ್ದಿ, ಏ. 1

★ ಗಡಿವಿವಾದ ತಕ್ಷಣ ಪರಿಹರಿಸಬೇಕೆಂದು ಒತ್ತಾಯಿಸಿ ಮುಂಬೈಯಲ್ಲಿ ನಡೆದ ರ‍್ಯಾಲಿಯಲ್ಲಿ ಕಾಂಗ್ರೆಸ್ (ಐ) ಮುಖಂಡ ಶರದ್ ಪವಾರ್ ಭಾಗವಹಿಸಿದ್ದರು. ಎರಡು ಕಮ್ಯೂನಿಸ್ಟ್ ಪಕ್ಷಗಳನ್ನು ಹಾಗೂ ಅವುಗಳಿಗೆ ಸಂಬಂಧಪಟ್ಟ ಕಾರ್ಮಿಕ ಸಂಘಗಳನ್ನು ಬಿಟ್ಟು ಉಳಿದೆಲ್ಲಾ ವಿರೋಧ ಪಕ್ಷಗಳ (ಜನತಾ, ಶಿವಸೇನೆ, ಡಾಂಗೆಯವರ ಪಕ್ಷವೂ ಸೇರಿ) ಮುಖಂಡರು ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದರು.

–ಡೆಕ್ಕನ್ ಹೆರಾಲ್ಡ್ ಸುದ್ದಿ, ಏ. 1

★ ಪ್ರಧಾನ ಮಂತ್ರಿಗಳ ವಿಷಪೂರಿತ ದೂಷಣೆಗಳಲ್ಲದೆ ಕಾಂಗ್ರೆಸ್ (ಐ) ಕನಿಷ್ಟ 10 ಕೋಟಿ ರೂ. ಗಳನ್ನು (ಚುನಾವಣಾ) ಕಾಳಗಕ್ಕೆ ಸುರಿದಿದೆ. 294 ಅಭ್ಯರ್ಥಿಗಳಲ್ಲಿ ಪ್ರತಿಯೊಬ್ಬರಿಗೂ 80 ಸಾವಿರ ರೂಪಾಯಿ ಮತ್ತು ಒಂದು ಕಾರು, ಅಲ್ಲದೆ ಗೆಲುವಿನ ನಿರೀಕ್ಷೆಯಿರುವ ಅಭ್ಯರ್ಥಿಗಳಿಗೆ ಕೊನೆಯ ಹಂತದಲ್ಲಿ ಮತ್ತೆ ಪ್ರತಿಯೊಬ್ಬರಿಗೆ 20 ಸಾವಿರ ರೂಪಾಯಿ ನೀಡಲಾಯಿತು. ಕಲ್ಕತ್ತೆಯ ದಿನಪತ್ರಿಕೆಗಳಲ್ಲಿ ಒಂದು ತಿಂಗಳು ಪೂರ್ಣ ಪುಟದ ಜಾಹೀರಾತುಗಳಿಗಾಗಿ ಒಟ್ಟು 50 ಲಕ್ಷ ರೂ. ಖರ್ಚು ಮಾಡಲಾಯಿತು.

–"ವೀಕ್" ಪತ್ರಿಕೆ, ಏ. 5–11

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053
Sultanpet B-53 Phone : 75331
Editorial and Managerial Office : L-56, K. V. Temple Street,
Editor P· Ramachandra Rao
Managing Editor : N.K. Upadhyaya